# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಸಂಪುಟ:01 Volume:01 • ಸಂಚಿಕೆ:230 Issue:230 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 06.02.2024 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2










**ಮೈಕ್ರೋ ನ್ಯೂಸ್**

## ತಂಬಾಕು ಉತ್ಪನ್ನಗಳ ಉಪಯೋಗದ ದುಷ್ಪರಿಣಾಮ ಜಾಗೃತಿ ಜಾಥಾ ಫೆ.7ಕ್ಕೆ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾ ಆರೋಗ್ಯ ಮತ್ತು ಕುಂಟುಂಬ ಕಲ್ಯಾಣಾ ಇಲಾಖೆ ವತಿಯಿಂದ ಗುಲಾಬಿ ಆಂದೋಲನಾ ಅಂಗವಾಗಿ ತಂಬಾಕು ಉತ್ಪನ್ನಗಳ ಉಪಯೋಗದಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲು ಜನ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಫೆಬ್ರವರಿ 7ರಂದು ಬೆಳಿಗ್ಗೆ 9.30 ಗಂಟೆಗೆ ನಗರದ ಡಿ.ಹೆಚ್.ಓ ಕಚೇರಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಕಾರ್ಯಕ್ರಮ ಅಧಿಕಾರಿ ತಿಳಿಸಿದ್ದಾರೆ.

## ವಿವಿಧೆಡೆ ಸಂವಿಧಾನ ಜಾಗೃತಿ ಇಂದು

**ಹಂಪಿ ಟೈಮ್ಸ್ ಹೊಸಪೇಟೆ**

ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ವಿವಿಧ ಹಳ್ಳಿಗಳಲ್ಲಿ ಫೆಬ್ರುವರಿ 6ರಂದು ಸಂವಿಧಾನ ಜಾಗೃತಿ ಕಾರ್ಯಕ್ರಮಗಳು ನಡೆಯಲಿವೆ.
ಫೆ.6ರಂದು ಬೆಳಗ್ಗೆ ಬ್ಯಾಸಿಗಿದೇರಿ ಗ್ರಾಮದಿಂದ ಜಾಥಾ ಆರಂಭವಾಗಿ ಬಳಿಕ ತಂಬ್ರಹಳ್ಳಿ, ಬನ್ನಿಗೋಳ, ಮುತ್ಕೂರು, ಬಾಚಿಗೊಂಡನಹಳ್ಳಿ ಗ್ರಾಮಗಳಲ್ಲಿ ಸಂಚರಿಸಿ ಕಡ್ಲಬಾಳು ಗ್ರಾಮದಲ್ಲಿ ವಾಸ್ತವ್ಯ ಮಾಡಲಿದೆ.

## ಹಡಗಲಿ ತಾಲೂಕಿನಲ್ಲಿ ವಿವಿಧೆಡೆ ಸಂವಿಧಾನ ಜಾಗೃತಿ ಜಾಥಾ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಹಡಗಲಿ ತಾಲೂಕಿನಲ್ಲಿ ಫೆ.7ರಿಂದ ಫೆಬ್ರವರಿ 11ರವರೆಗೆ ಸಂವಿಧಾನ ಜಾಗೃತಿ ಜಾಥಾ ಸಂಚರಿಸಲಿದೆ.
ಫೆ.7ರಂದು ಮಹಾಜನದಹಳ್ಳಿಯಿಂದ ಆರಂಭವಾಗುವ ಜಾಥಾ ಅಲ್ಲಿಂದ ಇಟ್ಟಿಗಿ, ಉತ್ತಂಗಿ, ಸೋಗಿ, ನಂದಿಹಳ್ಳಿ ಸಂಚರಿಸಿ ನಂತರ ಹೊಳಗುಂದಿ ತಲುಪಿ ಅಲ್ಲಿ ವಾಸ್ತವ್ಯ ಮಾಡಲಿದೆ. ಫೆ.8ರಂದು ಹಿರೇಮಲ್ಲನಕೇರಿ, ಕಾಲ್ವಿ(ಪ), ಸೋವೇನಹಳ್ಳಿ, ಕೊಂಬಳಿ, ನವಲಿ ಗ್ರಾಮಗಳಲ್ಲಿ, ಫೆ.9ರಂದು ದೇವಗೊಂಡನಹಳ್ಳಿ, ನಾಗತಿಬಸಾಪುರ, ಎಂ.ಎಂ.ವಾಡ, ಹಿರೇಹಡಗಲಿ ಗ್ರಾಮಗಳಲ್ಲಿ, ಫೆ.10ರಂದು ಹಗರನೂರು, ಕೆ.ಅಯ್ಯನಹಳ್ಳಿ, ಮಾಗಳ, ಬೀರಬ್ಬಿ, ಕತ್ತೆಬೇನ್ನೂರು, ಮಕರಬ್ಬಿ ಗ್ರಾಮಗಳಲ್ಲಿ, ಫೆ.11ರಂದು ಹೊಳಲು, ಮೈಲಾರ, ಕುರುವತ್ತಿ, ಹ್ಯಾರಡ, ದಾಸನಹಳ್ಳಿ ಗ್ರಾಮಗಳಲ್ಲಿ ಜಾಥಾ ಸಂಚರಿಸಲಿದೆ.


> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
>
> ಡಿ..ವಿ.ಜಿ.






# ನಿಮ್ಮ ಭೂ ದಾಖಲೆ ನಿಮಗೆ ಒಡೆತನಕ್ಕೊಂದು ಗ್ಯಾರಂಟಿ

## ಭೂ ದಾಖಲೆಗಳ ಡಿಜಿಟಲೀಕರಣ ಸ್ಪರ್ಶ । ತ್ವರಿತ ಆಡಳಿತಕ್ಕಾಗಿ ಮಾದರಿ ಅಭಿಲೇಖಾಲಯ ಉದ್ಘಾಟಿಸಿದ ಸಚಿವ ಜಮೀರ್ ಖಾನ್



**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ತಾಲ್ಲೂಕು ಕಚೇರಿಯಲ್ಲಿ ನೂತನವಾಗಿ ಸ್ಥಾಪಿಸಲಾದ 'ಮಾದರಿ ಅಭಿಲೇಖಾಲಯ'ವನ್ನು ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಸೋಮವಾರ ಉದ್ಘಾಟಿಸಿದರು.

ರಾಜ್ಯ ಸರ್ಕಾರದ ಕಂದಾಯ ಇಲಾಖೆಯ ಮಹತ್ತರ ಕಾರ್ಯಕ್ರಮವಾದ ಭೂ ಸುರಕ್ಷಾ, ಭೂ ದಾಖಲೆಗಳ ಇ-ಖಜಾನೆ ವ್ಯವಸ್ಥೆಯಿಂದ ತಾಲ್ಲೂಕು ಕಚೇರಿ, ಸರ್ವೇ ಮತ್ತು ನೋಂದಣಿ ಇಲಾಖೆಗಳ ಎಲ್ಲಾ ಭೂ ದಾಖಲೆಗಳ ಡಿಜಿಟಲೀಕರಣ ವ್ಯವಸ್ಥೆಯ ಮಾದರಿ ಅಭಿಲೇಖಾಲಯಕ್ಕೆ ಸೋಮವಾರ ಚಾಲನೆ ದೊರೆಯಿತು. ಈ ಸಂದರ್ಭದಲ್ಲಿ ಶಾಸಕ ಹೆಚ್.ಆರ್. ಗವಿಯಪ್ಪ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ತಹಶೀಲ್ದಾರ ವಿಶ್ವಜಿತ್ ಮೆಹ್ತಾ, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ ಸೇರಿದಂತೆ ಮತ್ತಿತರರಿದ್ದರು.

**ಮಾದರಿ ಅಭಿಲೇಖಾಲಯದ ವಿಶೇಷತೆ:**
ಹಳೆಯ ದುಸ್ಥಿತಿಯಲ್ಲಿರುವ ಭೂ ದಾಖಲೆಗಳನ್ನು ಶಾಶ್ವತ ಡಿಜಿ ದಾಖಲೆಗಳಾಗಿ ಪರಿವರ್ತನೆಯಾಗಲಿದೆ ರೆಕಾರ್ಡ್ ರೂಂಗಳಿಂದ ಪಡೆದುಕೊಳ್ಳಲು ಇರುವ ತೊಂದರೆಗಳ ನಿವಾರಣೆ. ಹಳೆಯ ದಾಖಲೆಗಳ ಸಂರಕ್ಷಣೆ ಹಾಗೂ ಕಳುವಾಗಲು, ತಿದ್ದಲು ಅಸಾಧ್ಯ. ನೇರವಾಗಿ ನೀವೇ ಡಿಜಿಟಲ್ ಮಾಧ್ಯಮದಿಂದ ಭೂ ದಾಖಲೆಗಳನ್ನು ಪಡೆದುಕೊಳ್ಳುವ ಸೌಲಭ್ಯ. ನಿಮ್ಮ ದಾಖಲೆಗಳನ್ನು ನಿಮ್ಮ ಕೈಗೆ ತಲುಪಿಸುವ ಯೋಜನೆ. ವಿಳಂಬ, ಅಡೆ ತಡೆಗಳನ್ನು ಆಲಿಸಿ, ತ್ವರಿತ ಆಡಳಿತ ಸೇವೆಯನ್ನು ಒದಗಿಸುವ ಪ್ರಯತ್ನ. ಡಿಜಿ ಸ್ಪರ್ಶದಿಂದ ಉತ್ತಮ ಜನಪರ ಆಡಳಿತ, ನಿಮ್ಮ ಭೂ ಒಡೆತನಕ್ಕೊಂದು ಗ್ಯಾರಂಟಿ. ಈ ಎಲ್ಲಾ ಸೌಲಭ್ಯಗಳು ಮಾದರಿ ಅಭಿಲೇಖಾಲಯದಿಂದ ಸಿಗಲಿವೆ.

## ಫೆ.8ರಂದು ಬೆಂಗಳೂರು ಚಲೋ




**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಗ್ರಾ.ಪಂ.ಸದಸ್ಯರ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಿರುವವರ ವಿರುದ್ಧ ಫೆ.8ರಂದು ಸ್ವಾಭಿಮಾನಿ ಸದಸ್ಯರಿಂದ ಬೆಂಗಳೂರು ಚಲೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಗ್ರಾ.ಪಂ.ಸದಸ್ಯರ ಮಹಾ ಒಕ್ಕೂಟದ ತಾಲೂಕು ಅಧ್ಯಕ್ಷೆ ಮಮತಾ ತಳವಾರ್ ಅವರು ತಿಳಿಸಿದರು.

ಒಕ್ಕೂಟದ ಸದಸ್ಯರು ಸೇರಿ ಪಟ್ಟಣದ ತಹಸೀಲ್ದಾರ್ ಕಚೇರಿಗೆ ತೆರಳಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದ ಬಳಿಕ ಮಾತನಾಡಿದರು. ಮೇಲಾಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಆಡಳಿತದಲ್ಲಿ ನೇರವಾಗಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಸಂವಿಧಾನ ಬದ್ಧವಾದ ಸಂಸ್ಥೆಗಳಾದ ಗ್ರಾ.ಪಂ.ಗಳ ಅಧ್ಯಕ್ಷ, ಉಪಾಧ್ಯಕ್ಷರು, ಸದಸ್ಯರಾಗಿ ಆಯ್ಕೆಯಾಗಿದ್ದರೂ ಮೂಕ ಪ್ರೇಕ್ಷಕರಾಗಿರುವಂತ ಪರಿಸ್ಥಿತಿ ಬಂದೊದಗಿದೆ. ಇದರಿಂದ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಗಾಂಧಿಜೀಯವರ ಆಶಯಗಳು ಮಣ್ಣುಪಾಲಗುತ್ತಿವೆ. ನಮ್ಮ ಬೇಡಿಕೆಗಳನ್ನು ಮುಂದಿಟ್ಟು ನಡೆಯುತ್ತಿರುವ ಈ ಹೋರಾಟಕ್ಕೆ ಸರ್ಕಾರ ಸ್ಪಂದಿಸಬೇಕು ಎಂದರು.

ಗ್ರಾಮಸಭೆ ಮತ್ತು ನಿಯಾಮವಳಿ ಪಾಲನೆ, ಬಾಪೂಜಿ ಸೇವಾ ಕೇಂದ್ರಗಳ ಬಲವರ್ಧನೆ, ಪಂಚಾಯತ್ ಸಂಸ್ಥೆಗಳ ಅಡಿಯಲ್ಲಿ ಕಾರ್ಯನಿರ್ವಹಿಸುವಂತಾಗಲು ಅಧಿಕಾರ ವಿಕೇಂದ್ರೀಕರಣ ಕಾಯ್ದೆ ರಚನೆ, ಪಂಚಾಯಿತಿ ಸದಸ್ಯರನ್ನು ರಾಜ್ಯ ಶಿಷ್ಟಾಚಾರಕ್ಕೆ ಒಳಪಡಿಸುವುದು ಹಾಗೂ ಕೇರಳ ಮಾದರಿಯ ಗೌರವಧನ ನೀಡಬೇಕು ಹಾಗೂ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನದಲ್ಲಿರುವ ತೊಡಕುಗಳನ್ನು ನಿವಾರಣೆ ಮಾಡುವಂತೆ ಸೇರಿ ಇತರ ಬೇಡಿಕೆಗಳನ್ನು ಮುಂದಿಟ್ಟು ಬೆಂಗಳೂರು ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಉಪ ತಹಸೀಲ್ದಾರ್ ಶಿವಕುಮಾರ್‌ಗೆ ಮನವಿ ಸಲ್ಲಿಸಿದರು. ಈ ವೇಳೆ ಒಕ್ಕೂಟದ ಉಪಾಧ್ಯಕ್ಷೆ ಕೆ.ಲಕ್ಷ್ಮೀದೇವಿ, ಎಸ್.ಲಕ್ಷ್ಮವ್ವ, ನಾಗರಾಜ್, ಎ.ಗಂಗಮ್ಮ ಹನುಮಂತಪ್ಪ, ಕರೀಂಸಾಬ್, ಎಸ್.ನಾಗರಾಜ್, ಕೆ.ಮಂಜುನಾಥ ಸೇರಿದಂತೆ ಅನೇಕರು ಇದ್ದರು.

# ಹೀಗೆ ಮಾಡಿದರೆ ವಿದ್ಯಾರ್ಥಿಗಳಿಗೆ ಪರೀಕ್ಷೆ ಕಬ್ಬಿಣದ ಕಡಲೆ ಅಲ್ಲ



**ಹಂಪಿ ಟೈಮ್ಸ್ ಕೂಡ್ಲಿಗಿ**

ವಿದ್ಯಾರ್ಥಿಗಳು ಏಕಾಗ್ರತೆ ಹಾಗೂ ಶಿಸ್ತು ರೂಢಿಸಿಕೊಂಡರೇ ಮಾತ್ರ ಶಿಕ್ಷಣದಲ್ಲಿ ಪ್ರಗತಿ ಸಾಧ್ಯ ಎಂದು ಬಿಇಒ ಪದ್ಮನಾಭ ಕರಣಂ ತಿಳಿಸಿದರು.

ಪಟ್ಟಣದ ಸರ್ಕಾರಿ ಜೂನಿಯರ್ ಕಾಲೇಜಿನ ಪ್ರೌಢಶಾಲಾ ಆವರಣದಲ್ಲಿ ಬಿಇಒ ಕಚೇರಿ, ಸರ್ಕಾರಿ ನೌಕರರ ಸಂಘ ಹಾಗೂ ರಾಣೇಬೆನ್ನೂರಿನ ನಂದೀಶ್ವರ ನೈಪುಣ್ಯ ಕೌಶಲ್ಯ ಸಂಸ್ಥೆ ವತಿಯಿಂದ 10 ನೇ ತರಗತಿ ವಿಧ್ಯಾರ್ಥಿಗಳಿಗೆ ಪರೀಕ್ಷೆ ಎದುರಿಸುವ ಹಾಗೂ ಪ್ರಶ್ನೆ ಪತ್ರಿಕೆಗಳನ್ನ ಯಾವ ರೀತಿ ಉತ್ತರಿಸುವ ಕೌಶಲ್ಯ ಕುರಿತು ಏರ್ಪಡಿಸಿದ್ದ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದರು. ವಿಧ್ಯಾರ್ಥಿಗಳು ಎಸ್‌ಎಸ್‌ಎಲ್ ಸಿ ಹಂತದಲ್ಲಿ ಒಂದು ನಿರ್ದಿಷ್ಟ ಗುರಿಯೊಂದಿಗೆ ಅಭ್ಯಾಸ ಮಾಡಬೇಕು ಇದರಿಂದ ನಿಮಗೆ ಹೆಚ್ಚಿನ ಅಂಕಗಳನ್ನು ಪಡೆಯಲು ಸಾಧ್ಯವಾಗುತ್ತದೆ. ವಿಧ್ಯಾರ್ಥಿಗಳು ನಿತ್ಯ ದಿನಚರಿಯಲ್ಲಿ ಪಾಠಗಳನ್ನು ಓದಲು ಇಂತಿಷ್ಟು ಸಮಯವನ್ನು ನಿಗದಿ ಮಾಡಬೇಕು. ಪ್ರತಿ ಒಂದು ಗಂಟೆಗೆ ಸ್ವಲ್ಪ ವಿಶ್ರಮಿಸಿ, ಟೀ, ಕಾಫಿ ಅಥಾವ ಏನಾನ್ನದರು ಸೇವನೆ ಮಾಡಿ ಇನ್ನೊಂದು ವಿಷಯದ ಪುಸ್ತಕವನ್ನು ಓದಲು ಅಣಿಯಾಗಬೇಕು. ಓದಿದ ನಂತರ ಆ ವಿಷಯಗಳ ಮನನ ಮಾಡುವುದು ಅತೀ ಅವಶ್ಯ, ಕಾಡು ಹರಟೆ, ಟಿವಿ, ಮೊಬೈಲ್‌ಗಳನ್ನು ಪರೀಕ್ಷಾ ವೇಳೆಯಲ್ಲಿ ಬಿಡಬೇಕು. ನಿಮ್ಮ ಏಕಾಗ್ರತೆ ಏನಿದ್ದರೂ ಪಾಠ ಭೋದನೆಗೆ ಮೀಸಲಿರಬೇಕು. ತರಗತಿಯ ಹಿಂದಿನ ಹಲವು ವರ್ಷಗಳ ಪ್ರಶ್ನೆ ಪತ್ರಿಕೆಗಳನ್ನು ತೆಗೆದುಕೊಂಡು ಅವುಗಳಿಗೆ ಉತ್ತರಿಸಬೇಕು ಇದರಿಂದ ಪರೀಕ್ಷೆ ಒಂದು ಕಬ್ಬಿಣದ ಕಡಲೆ ಎಂದು ಅನ್ನಿಸಲು ಸಾಧ್ಯವೇ ಇಲ್ಲ ಎಂದು ತಿಳಿಸಿದ ಅವರು, ಈ ಕ್ರಮ ಅನುಸರಣೆ ಮಾಡಿದರೆ ವಿಧ್ಯಾರ್ಥಿಗಳು ಅನುತೀರ್ಣ ಆಗಲು ಸಾಧ್ಯವೇ ಇಲ್ಲ, ನೀವು ಗುರಿ ಇಟ್ಟಷ್ಟೇ ಅಂಕಗಳನ್ನು ಪಡೆಯಲು ಸಹಕಾರಿ ಎಂದು ಪ್ರೋತ್ಸಾಹದ ಮಾತುಗಳನ್ನ ತಿಳಿಸಿದರು. ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಪಿ.ಶಿವರಾಜ್ ಮಾತನಾಡಿ, ಎದೆಗೆ ಬಿದ್ದ ಅಕ್ಷರ, ಭೂಮಿಗೆ ಬಿದ್ದ ಬೀಜ ಯಾವತ್ತು ಅನುಪಯುಕ್ತ ಆಗಲು ಸಾಧ್ಯವಿಲ್ಲ. ವಿಧ್ಯಾರ್ಥಿಗಳು ಕಷ್ಟಪಟ್ಟು ಅಂದಿನ ಪಾಠಗಳನ್ನು ಶ್ರದ್ಧೆಯಿಂದ ಓದಿ, ಶಿಕ್ಷಕರು ನೀಡಿದ ಸಲಹೆಗಳನ್ನು ಪಾಲಿಸದರೇ ಯಶಸ್ಸು ಖಂಡಿತವಾಗಿ ಸಿಗುತ್ತದೆ. ವಿಧ್ಯಾರ್ಥಿಗಳ ಜೀವನದಲ್ಲಿ ಎಸ್‌ಎಸ್‌ಎಲ್ ಸಿ ಪ್ರಮುಖ ಘಟ್ಟ, ಈ ಸಮಯದಲ್ಲಿ ವಿಧ್ಯಾರ್ಥಿಗಳು ವರ್ಷವಿಡಿ ಶಿಕ್ಷಕರು ಮಾಡಿದ ಭೋದನೆಯನ್ನ ಮನನ ಮಾಡಿಕೊಂಡು ಧೈರ್ಯದಿಂದ ಪರೀಕ್ಷೆಗಳನ್ನು ಎದುರಿಸಿ ಉತ್ತಮ ಅಂಕ ಪಡೆದು ರಾಜ್ಯಮಟ್ಟದಲ್ಲಿ ಗುರುತಿಸಲ್ಪಡುವಂತೆ ಅಂಕಗಳನ್ನು ಪಡೆಯುವಂತೆ ತಿಳಿಸಿದರು. ರಾಣೇಬೆನ್ನೂರಿನ ನಂದೀಶ್ವರ ನೈಪುಣ್ಯ ಕೌಶಲ್ಯ ಸಂಸ್ಥೆಯ ನಂದೀಶ್ ಶೆಟ್ಟರ್ ವಿಧ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಪ್ರಶ್ನೆಗಳಿಗೆ ಯಾವ ರೀತಿಯ ಉತ್ತರಗಳನ್ನ ನೀಡಬೇಕು, ಪರೀಕ್ಷೆಗೆ ಪೂರ್ವ ತಯಾರಿ ಹೇಗಿರಬೇಕು ಎನ್ನುವ ಪಟ್ಟುಗಳನ್ನ ತಿಳಿಸಿದರು. ಶಿಕ್ಷಣ ಸಮನಯ್ವಾಧಿಕಾರಿ ಜಗದೀಶ್, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ । ಎಸ್.ವಿ.ಸಿದ್ದರಾಧ್ಯ, ಉಪಾಧ್ಯಕ್ಷ ಭಾಸ್ಕರ ನಾಯ್ಕ್, ಆರ್.ಬಿ.ಬಸವರಾಜ, ಮುಖ್ಯ ಶಿಕ್ಷಕ ಟಿ.ಬಸವರಾಜ, ಕೆ.ಎಸ್.ವೀರೇಶ್, ಉಡುಚಪ್ಪ, ರುದ್ರಪ್ಪ, ಇಸಿಓ ಮಂಜುನಾಥ, ನಾಗರಾಜ,ಹನುಮಂತಪ್ಪ ಗಜಾಪುರ ಸೇರಿದಂತೆ ವಿಧ್ಯಾರ್ಥಿಗಳು ಇದ್ದರು.




## ವಚನ ಅರಿವು

# ಬೇರೆಯರಿಗೆ ಹೇಳುವ ಮುನ್ನ

**ನುಡಿಯ ಹಂಗಿನ್ನೂ ನಿಮಗೆ ಹಿಂಗದು,**
**ನಡೆಯನೆಂತು ಪರರಿಗೆ ಹೇಳುವಿರಿ?**
**ಒಡಲ ಹಂಗಿನ ಸುಳುಹು ಬಿಡದು,**
**ಎನ್ನೊಡನೆ ಮತ್ತೇತರ ಅನುಭವವಣ್ಣಾ?**
**ತಾನಾದಲ್ಲದೆ ಇದಿರಿಂಗೆ ಹೇಳಬಹುದೆ?**
**ಅರಿವ ತೋರಬಲ್ಲಡೆ ತನ್ನನರುಹದೆ ಅರಿವನು**
**ಕಾಣಾ ಎನ್ನ ಅಜಗಣ್ಣತಂದೆ.**

**– ಮುಕ್ತಾಯಕ್ಕ**

ನುಡಿ ಮತ್ತು ನಡೆ ಎರಡು ಒಂದಾಗಿರಬೇಕು. ನುಡಿಯುವ ನುಡಿಯಲ್ಲಿ ಸತ್ಯ, ಅರಿವು, ಜ್ಞಾನ ತುಂಬಿರಬೇಕು. ನಡೆಯಲ್ಲಿ ಪ್ರಾಮಾಣಿಕತೆ, ಕಪಟವಿಲ್ಲದೆ, ನೈತಿಕತೆ ತುಂಬಿರಬೇಕು. ಹೇಳುವ ಮಾತಷ್ಟೇ ನಯವಾಗಿದ್ದರೆ ಸಾಲದು. ಅವರ ನಡೆಯು ನುಡಿದಂತೆ ಇರಬೇಕು. ಆ ಮಾತಿಗೆ ಬೆಲೆ ಇರುತ್ತದೆ. ಆ ನಡೆಗೆ ಗೌರವವಿರುತ್ತದೆ. ಬೇರೆಯವರು ಅವರ ಮಾರ್ಗದರ್ಶನ ಪಡೆಯಬಹುದು. ಆಸೆ, ಆಮಿಷಗಳನ್ನು ಕಳೆದುಕೊಳ್ಳದೆ, ದೇಹ ಬಯಸಿದ್ದೆಲ್ಲವನ್ನು ಮಾಡುವ ಪ್ರಯತ್ನ ಮಾಡಿದರೆ ದೇಹದ ಹಂಗಿನಲ್ಲಿ ಇದ್ದಂತೆಯೇ. ಆದ್ದರಿಂದ ದೇಹದ ಮೇಲಿನ ಹಂಗು ತೊರೆಯಬೇಕು. ಆಗ ಅನುಭಾವ ಸಾಧ್ಯವಾಗುತ್ತದೆ. ಅರಿವು ಅಳವಡುತ್ತದೆ. ತನ್ನ ಅವಗುಣಗಳನ್ನು ಕಳೆದುಕೊಂಡು ಶುದ್ಧರಾಗಿ ಬದುಕಿದರೆ ಅದೇ ಇತರರಿಗೆ ನೈತಿಕ ಮಾರ್ಗವಾಗುತ್ತದೆ. ತನು, ಮನದ ಅವಗುಣಗಳನ್ನು ಬಿಡದೆ ಇತರರಿಗೆ ಉಪದೇಶ ಮಾಡಲು ಹೋಗಬಾರದು. ಶರಣ ಅಜಗಣ್ಣ ತಂದೆ ತನ್ನನೇ ತೋರದೆ ಅರಿವಿನಲ್ಲಿ ಬದುಕಿದನು ಎನ್ನುತ್ತಾಳೆ ಮುಕ್ತಾಯಕ್ಕ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

# ಮೋದಿ ಗ್ಯಾರಂಟಿ ಎಂಬ ಸುಳ್ಳು ಭರವಸೆಗೆ ಜನರು ಮರುಳಾಗಬಾರದು : ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು : ಕೇವಲ ಸುಳ್ಳನ್ನು ನುಡಿಯುವ ಬಿಜೆಪಿಯವರ ಹಾಗೂ ಮೋದಿ ಗ್ಯಾರಂಟಿ ಎಂಬ ಸುಳ್ಳು ಭರವಸೆಗೆ ಜನರು ಮರುಳಾಗಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಅವರು ಸೋಮವಾರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ 100 ಹೊಸ ವಿನ್ಯಾಸ ಕರ್ನಾಟಕ ಸಾರಿಗೆ ಬಸ್ಸುಗಳನ್ನು ಲೋಕಾರ್ಪಣೆ ಮಾಡಿದ ನಂತರ ಮಾತನಾಡಿದರು. ಎಲ್ಲ ಜಾತಿ ಧರ್ಮಗಳ ಬಡವರಿಗೆ ಪಕ್ಷಾತೀತ, ಜಾತ್ಯಾತೀತವಾಗಿ ಎಲ್ಲ ಮಹಿಳೆಯರಿಗೂ ಉಚಿತವಾಗಿ ಪ್ರಯಾಣಿಸಲು ಅವಕಾಶ ಮಾಡಿಕೊಡಲಾಗಿದೆ. ಹಿಂದೆ ಯಾವ ಸರ್ಕಾರದವರು ಇಂತಹ ಪ್ರಯತ್ನ ಕೈಗೊಂಡಿರಲಿಲ್ಲ. ಗ್ಯಾರಂಟಿಗಳನ್ನು ಜಾರಿಗೊಳಿಸಲು ಸಾಧ್ಯವಿಲ್ಲ. ಪ್ರದಾನಿ ಮೋದಿಯವರೂ ರಾಜ್ಯ ದಿವಾಳಿಯಾಗುತ್ತದೆ ಎಂದರು. ತಾವು 10 ವರ್ಷದಿಂದ ಅಧಿಕಾರದಲ್ಲಿದ್ದರೂ ಇಂತಹ ಗ್ಯಾರಂಟಿಗಳನ್ನು ಜನಗರಿಗೆ ನೀಡಲಿಲ್ಲ. ವಿದೇಶದಲ್ಲಿರುವ ಕಪ್ಪು ಹಣವನ್ನು ದೇಶಕ್ಕೆ ತಂದರೆ ಭಾರತದ ಪ್ರತಿ ಕುಟುಂಬಕ್ಕೂ 15 ಲಕ್ಷ ನೀಡುವ ಪ್ರತಿವರ್ಷ 2 ಕೋಟಿ ಉದ್ಯೋಗ ಸೃಷ್ಟಿಸುವ, ರೈತರ ಆದಾಯ ದ್ವಿಗುಣಗೊಳಿಸುವ ಭರವಸೆ ನೀಡಿದ್ದರು. ಆದರೆ ಈ ಯಾವುದೇ ಭರವಸೆಗಳನ್ನು ಅವರು ಈಡೇರಿಸದ ಪ್ರಧಾನಿ ಮೋದಿಯವರು ಈಗ ಮೋದಿ ಗ್ಯಾರಂಟಿ ಎಂದು ಸುಳ್ಳು ಹೇಳುತ್ತಿದ್ದಾರೆ. ಅವರ ಸುಳ್ಳುಗಳಿಗೆ ಜನರು ಮರುಳಾಗಬಾರದು ಎಂದರು.

**ಗ್ಯಾರಂಟಿಗಳಿಗೆ ಬಿಟ್ಟಿ ಭಾಗ್ಯ ಎಂಬ ಬಿಜೆಪಿಯ ಮೂದಲಿಕೆ:**
1.17 ಕೋಟಿ ಮಹಿಳಾ ಯಜಮಾನಿಗೆ ತಿಂಗಳಿಗೆ 2000 ರೂ. ನೀಡುವ ಗೃಹಲಕ್ಷ್ಮಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಶಕ್ತಿ ಯೋಜನೆಯಡಿ 4530 ಕೋಟಿ ರೂ.ಗಳನ್ನು ವೆಚ್ಚವಾಗಿದೆ ನಮ್ಮ ಪಂಚಗ್ಯಾರಂಟಿಗಳು ರಾಜ್ಯದ 4.50 ಕೋಟಿ ಜನರಿಗೆ ತಲುಪುತ್ತಿದೆ. ನಮ್ಮ ಗ್ಯಾರಂಟಿಗಳನ್ನು ಬಿಟ್ಟಿ ಭಾಗ್ಯ ಎಂದು ಕೀಳುಮಟ್ಟದ ಮಾತುಗಳನ್ನು ಬಿಜೆಪಿಯವರು ಆಡಿದರು. ಬಡವರ ಬಗ್ಗೆ ಕಾಳಜಿ ಇದ್ದು, ರಾಜಕೀಯ ಇಚ್ಛಾಶಕ್ತಿ ಇದ್ದಾಗ ಮಾತ್ರ ಜನರಿಗೆ ಉತ್ತಮ ಕಾರ್ಯಕ್ರಮಗಳನ್ನು ನೀಡಲು ಸಾಧ್ಯ. ಬಡವರಿಗೆ ಆರ್ಥಿಕ ಶಕ್ತಿ ತುಂಬುವುದು ಕಾಂಗ್ರೆಸ್ ನ ಬದ್ಧತೆ ಎಂದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು: **ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

# ಸಾಮಾಜಿಕ ಜಾಲತಾಣವೆಂಬ ವಿಶ್ವವಿದ್ಯಾಲಯಗಳು



ಓರ್ವ ಮಹಿಳೆ ತನ್ನ ದೂರದ ಸಂಬಂಧಿಗೆ ಉಂಟಾದ ಕಾಯಿಲೆಯ ಬಗ್ಗೆ ಅರಿತುಕೊಳ್ಳಲು ಸಾಮಾಜಿಕ ಜಾಲತಾಣದ ಮೊರೆ ಹೊಕ್ಕಳು. ಪ್ರಾರಂಭಿಕ ಹಂತದಲ್ಲಿರುವ ಆ ಕಾಯಿಲೆಯ ಭೀಕರತೆಗಳನ್ನು ವಿಧ ವಿಧವಾಗಿ ವರ್ಣಿಸಿದ ರೀತಿ ಮತ್ತು ಚಿತ್ರಣವನ್ನು ಕಂಡು ಆಕೆ ಭಯಭೀತಳಾದಳು. ಮುಂದೆ ಆ ಕಾಯಿಲೆಯನ್ನೇ ಹೋಲುವ ಸಣ್ಣ ತೊಂದರೆ ತನ್ನ ಸಂಬಂಧಿಗೆ ಇರುವುದು ಎಂದು ಅರಿತಾಗ ನಿರಾಳಗೊಂಡಳು

ಇನ್ನೊಂದು ಪ್ರಕರಣದಲ್ಲಿ ಒಬ್ಬ ವ್ಯಕ್ತಿ ತನ್ನ ವಿರೋಧಿಯನ್ನು ಸಾಯಿಸಿದ ನಂತರ ಆತನನ್ನು ತುಂಡು ತುಂಡಾಗಿ ಕತ್ತರಿಸಿ ಫ್ರಿಡ್ಜ್ ನಲ್ಲಿ ಇಟ್ಟ ವಿಷಯವನ್ನ ದೃಶ್ಯ ಮಾಧ್ಯಮದಲ್ಲಿ ವೀಕ್ಷಿಸಿದ ಮತ್ತೋರ್ವ ವ್ಯಕ್ತಿ ಈ ಮಾಹಿತಿಯನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿಕೊಂಡು ತನ್ನ ಜೊತೆ ಲಿವಿಂಗ್ ಟು ಗೆದರ್ ನಲ್ಲಿ ಇದ್ದ ಯುವತಿಯನ್ನು ಉಸಿರುಗಟ್ಟಿಸಿ ಸಾಯಿಸಿ, ಆಕೆಯನ್ನು ಹಲವಾರು ತುಂಡುಗಳಾಗಿ ಕತ್ತರಿಸಿ ಸಾಗಿಸುವಾಗ ಸಿಕ್ಕು ಬಿದ್ದನು.

ಅನ್ಯೆತಿಕ ಸಂಬಂಧಗಳಲ್ಲಿ ಜೋಡಿಗಳಲ್ಲಿ ಇಬ್ಬರಲ್ಲಿ ಒಬ್ಬರು ತಮ್ಮ ಸಂಬಂಧಗಳನ್ನು ಕೊನೆಗಾಣಿಸಿಕೊಳ್ಳಲು ಮತ್ತೊಬ್ಬರ ಕೊಲೆ ಮಾಡುವುದು ಸಾಮಾನ್ಯ ಎಂಬಂತೆ ಪದೇ ಪದೇ ವಾಹಿನಿಗಳಲ್ಲಿ ತೋರಿಸುವುದು ಅನಪೇಕ್ಷಣೀಯ.

ಮತ್ತೊಂದು ಪ್ರಕರಣದಲ್ಲಿ ರಾಜಧಾನಿಯಲ್ಲಿ ಆದ ದರೋಡೆಯೊಂದರ ಮುಖ್ಯ ಆಪಾದಿತನನ್ನು ಬಂಧಿಸಿದ ಹಿರಿಯ ಪೊಲೀಸ್ ಮೇಲಧಿಕಾರಿಗೆ ದೊರೆತ ಮಾಹಿತಿ ಆತ ಚಲನಚಿತ್ರವೊಂದರ ಪ್ರಭಾವಕ್ಕೊಳಗಾಗಿ ಆ ರೀತಿ ಸಿನಿಮೀಯ ಶೈಲಿಯಲ್ಲಿ ದರೋಡೆ ಮಾಡಿದನೆಂದು.

ಇನ್ನು ಕೊರೊನ ಹೆಮ್ಮಾರಿ ನಮ್ಮ ದೇಶವನ್ನು ಆವರಿಸಿಕೊಂಡಾಗ ಮನೆಯಲ್ಲಿ ದೂರದರ್ಶನದ 24/7 ಚಾನಲ್ ಗಳನ್ನು ನೋಡದೆ, ಸಾಮಾಜಿಕ ಜಾಲತಾಣಗಳ ಮೊರೆ ಹೋಗದೆ ತಮ್ಮ ಪಾಡಿಗೆ ತಾವು ಕೆಲಸ ತಂತಮ್ಮ ಕೆಲಸಗಳಲ್ಲಿ ಮಗ್ನರಾಗಿ ದಿನಗಳೆದವರಿಗೆ ಯಾವುದೇ ತೊಂದರೆ ಆಗದಿದ್ದರೂ, ಮುಂಜಾನೆಯಿಂದ ಸಂಜೆಯವರೆಗೂ ಜಾಲತಾಣಗಳನ್ನು ಜಾಲಾಡುವವರಿಗೆ ಸುದ್ದಿ ವಾಹಿನಿಗಳನ್ನು ವೀಕ್ಷಿಸುತ್ತಾ ಕುಳಿತ ಜನರಿಗೆ ಕ್ಷಣ ಕ್ಷಣಕ್ಕೂ ಬರುವ ಬ್ರೇಕಿಂಗ್ ನ್ಯೂಸ್ ಗಳ ಮೂಲಕ ಭೀತಿಯನ್ನು ಬಿತ್ತಿದ್ದು ಸಾಮಾಜಿಕ ಜಾಲತಾಣಗಳು ಮತ್ತು ವಾಹಿನಿಗಳು ಎಂಬುದು ಸುಳ್ಳಲ್ಲ. ನಿಖರವಾದ ಮಾಹಿತಿ ಇಲ್ಲದೆ ಬೇರೆ ಬೇರೆ ಕಡೆಗಳಲ್ಲಿ ನಡೆದ ವಿಷಯಗಳನ್ನು ತಾವು ವಸ್ತುತಃ ನೋಡಿರುವಂತೆ,ಕಣ್ಣಕಟ್ಟುವಂತೆ ವಿವರಿಸಿ ಜನರ ಮಾನಸಿಕ ಆರೋಗ್ಯವನ್ನು, ನೆಮ್ಮದಿಯನ್ನು ಇವರು ಕಸಿದಿದ್ದರೆಂಬುದು ಅಕ್ಷರಶಃ ನಿಜ. ಜನರಿಗೆ ಮಾಹಿತಿ ನೀಡುತ್ತೇವೆ ಎಂಬ ಹುಡುಗಾಟಿಕೆಯಲ್ಲಿ ನಮ್ಮದೇ ಚಾನಲ್ನಲ್ಲಿ ಮೊಟ್ಟಮೊದಲ ಎಕ್ಸ್ ಕ್ಲೂಸಿವ್ ನ್ಯೂಸ್ ಬಿಡುಗಡೆಗೊಂಡಿತು ಎಂಬ ಟಿ ಆರ್ ಪಿ ಗಳ ಮೇಲಾಟದ ಚಾನೆಲ್ಗಳ ಹಾವಳಿಗೆ ತುತ್ತಾಗಿ ಜನರ ಎದೆ ಬಡಿತ ಏರುಪೇರಾಗಿ ಗುಂಡಿಗೆ ಬಾಯಿಗೆ ಬಂದದ್ದು ಸುಳ್ಳಲ್ಲ.ಎಷ್ಟೋ ಜನರು ವಿವಿಧ ಜಾಲತಾಣಗಳ ಮೂಲಕ ಹೆಚ್ಚಿನ ಮಾಹಿತಿ ಪಡೆಯುವ ಕುತೂಹಲಕ್ಕೆ ಒಳಗಾಗಿ ಮಾನಸಿಕವಾಗಿ ಧೈರ್ಯ ಕಳೆದುಕೊಂಡು ಮುಂದೆ ಕಾಯಿಲೆ ತಮ್ಮನ್ನು ಒಕ್ಕರಿಸಿಕೊಂಡಾಗ ಸಹಜವಾಗಿಯೇ ಎದೆಗುಂದಿ ಕರೋನಾ ತೊಂದರೆಗಿಂತ ಹೆಚ್ಚಾಗಿ ಭಯದಿಂದಾಗಿ ಹೃದಯಾಘಾತ, ಹೃದಯ ಸ್ತಂಭನಕ್ಕೆ ಒಳಗಾಗಿ ಸತ್ತು ಹೋದರು.

ಇದು ಇನ್ಫೋ ಯುಗ.... ಮಾಹಿತಿಗಳು ಸುನಾಮಿಯಂತೆ ಎಲ್ಲ ಕಡೆಯಿಂದ ಹರಿದು ಬರುತ್ತಿವೆ. ಅನವಶ್ಯಕ ಮಾಹಿತಿಗಳು ಹೆಚ್ಚು ಸದ್ದು ಮಾಡುತ್ತವೆ.ಇದೆಲ್ಲಕ್ಕೂ ಕಾರಣ ಸಾಮಾಜಿಕ ಜಾಲತಾಣಗಳು ಎಂದು ಹೇಳಿದರೆ ಅದು ಒಮ್ಮುಖ ಹೇಳಿಕೆಯಾಗಿ ಪರಿಣಮಿಸುತ್ತದೆ ಪ್ರತಿಯೊಂದು ಕ್ರಿಯೆಗೂ ಅದಕ್ಕೆ ಸಮನಾದ ಪ್ರತಿಕ್ರಿಯೆ ಇದ್ದೇ ಇರುತ್ತದೆ. ಜಾಲತಾಣಗಳಲ್ಲಿ ಪ್ರಕಟವಾಗುವ ಎಲ್ಲಾ ಮಾಹಿತಿಗಳು ನೂರು ಪ್ರತಿಶತ ನಿಜವಲ್ಲ ಎಂಬುದರ ಅರಿವು, ತಪ್ಪು ಸರಿಗಳನ್ನು ತುಲನೆ ಮಾಡುವ ಶಕ್ತಿ ನಮಗೆ ಇರಬೇಕು. ತಾನು ಕುಡಿಯುತ್ತಿರುವುದು ಹಾಲೋ, ನೀರೋ ಎಂಬುದನ್ನು ಪರೀಕ್ಷಿಸಿ ಬೇರ್ಪಡಿಸುವ ಹಂಸ, ತಾನು ತಿನ್ನುತ್ತಿರುವ ಹಣ್ಣು ರುಚಿ ಇಲ್ಲದಿದ್ದರೆ ಅದನ್ನು ನಿರ್ದಾಕ್ಷಿಣ್ಯವಾಗಿ ಎಸೆಯುವ ಮಂಗ, ತನಗೆ ಬೇಡದ ಆಹಾರವನ್ನು ತಿರಸ್ಕರಿಸುವ ನಾಯಿ, ಸಿಂಹ ಮತ್ತಿತರ ಪಶು ಪಕ್ಷಿಗಳು ನಮಗೆ ಈ ವಿಷಯದಲ್ಲಿ ಮಾರ್ಗದರ್ಶನ ತೋರಬಲ್ಲವು. ಮಾತು ಬಾರದ ಮೂಕ ಪ್ರಾಣಿಗಳಿಗೆ ಇರುವ ಬುದ್ಧಿ, ತಿಳುವಳಿಕೆ ಜಗತ್ತಿನ ಅತ್ಯಂತ ಬುದ್ಧಿವಂತ ಸೃಷ್ಟಿ ಎಂದು ಕರೆಸಿಕೊಳ್ಳುವ ಮನುಷ್ಯನಲ್ಲಿ ಇಲ್ಲದೆ ಇರುವುದು ಸೋಜಿಗವೇ ಸರಿ.

ಎಷ್ಟೋ ಬಾರಿ ದೇಶದಲ್ಲಿ ಕೋಮು ಗಲಭೆಯನ್ನು ಹರಡಲು, ಜನರ ಮನಸ್ಸಿನಲ್ಲಿ ವಿಷದ ಭಾವನೆಗಳನ್ನು ಬಿತ್ತಲು, ಇಲ್ಲದ ಅನರ್ಥಗಳನ್ನು ಸೃಷ್ಟಿಸಲು ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರವಾಗುವ ಅತಿರಂಜಿತ ವಿಷಯಗಳು ಕಾರಣವಾಗುತ್ತವೆ. ಮಾನಸಿಕವಾಗಿ ತಾವು ಮಾತ್ರ ಸರಿ, ತಮ್ಮ ಅಭಿಪ್ರಾಯಗಳು ತಮ್ಮ ಧರ್ಮ ಮಾತ್ರ ಸರಿ ಎಂಬ ಏಕಪಕ್ಷೀಯವಾದ ಚಿಂತನೆಗಳು ಸಮಾಜದ ಆರೋಗ್ಯವನ್ನು ಕೆಡಿಸುತ್ತವೆ.

ಶೀರ್ಷಿಕೆಯಲ್ಲಿ ಉದ್ಗಾರವಾಚಕ ಮತ್ತು ಪ್ರಶ್ನಾರ್ಥಕ ಚಿಹ್ನೆಗಳು ಇವೆಯಷ್ಟೇ.... ಎಷ್ಟೋ ಬಾರಿ ಕೆಲ ಪ್ರಶ್ನಾರ್ಥಕ ಚಿಹ್ನೆಗಳ ಮೂಲಕ ಜನರಲ್ಲಿ ಗೊಂದಲ ಹುಟ್ಟಿಸುವ ಸಾಮಾಜಿಕ ಜಾಲತಾಣಗಳು ಕೂಡ ಇವೆ. ಉದಾಹರಣೆಗೆ...

* ಖ್ಯಾತ ಅಭಿನೇತ್ರಿ ವಿಚ್ಛೇದನ ಮಾಡಿಕೊಳ್ಳುತ್ತಿದ್ದಾಳೆ?? ಮಾಹಿತಿಗಾಗಿ ಪರಿಶೀಲಿಸಿ,
*ಆಟಗಾರನ ಕ್ರಿಕೆಟ್ ಜೀವನ ಅಂತ್ಯ??
* ಪ್ರಖ್ಯಾತ ದಂಪತಿಗಳ ವಿವಾಹ ವಿಚ್ಛೇದನದಲ್ಲಿ ಪರ್ಯವಸಾನ!

ಮೇಲಿನ ವಾಕ್ಯಗಳ ಮುಂದೆ ಇರುವ ಪ್ರಶ್ನಾರ್ಥಕ ಚಿಹ್ನೆಗಳು



ಉದ್ಗಾರವಾಚಕಗಳು ಮಾಹಿತಿಯ ಅಧಿಕೃತತೆಯ ಕುರಿತು ಗೊಂದಲವನ್ನು ಹುಟ್ಟಿಸುತ್ತವೆ. ಸತ್ಯಾಸತ್ಯತೆಗಳ ನಡುವಿನ ಕೂದಲೆಳೆಯ ಅಂತರವನ್ನು ಮರೆಮಾಚುತ್ತವೆ.

ಇನ್ನೂ ಕೆಲವರು ಎಲ್ಲಾ ವಿಷಯಗಳಿಗೂ ಪುಸ್ತಕದ ಮೊರೆ ಹೋಗದೆ ಸಾಮಾಜಿಕ ಜಾಲತಾಣಗಳಲ್ಲಿ ಉತ್ತರ ಹುಡುಕುವುದು ಸುಲಭ, ಅಲ್ಲದೆ ಚಿತ್ರಸಹಿತ ವಿವರಣೆ ಸಿಗುತ್ತದೆ ಎಂಬುದು ಮತ್ತೊಂದು ಕಾರಣ.

ಇನ್ನು ರಾಜಕಾರಣಿಗಳಾದರೂ ಅಷ್ಟೇ.... ಯಾರೋ ಒಬ್ಬರು ಬಾಯಿ ತಪ್ಪಿ ತಮ್ಮ ವೈಯುಕ್ತಿಕ ಅಭಿಪ್ರಾಯವನ್ನು ಸಾರ್ವಜನಿಕವಾಗಿ ಮಂಡಿಸಿದಾಗ ಅದು ಅವರ ಪಕ್ಷಕ್ಕೆ ನುಂಗಲಾರದ ತುತ್ತಾಗುತ್ತದೆ. ಎಷ್ಟೋ ಬಾರಿ ಆವೇಶದಲ್ಲಿ ಉಂಟಾಗುವ ಮಾನವ ಸಹಜ ತಪ್ಪುಗಳು ಸಾರ್ವಜನಿಕ ಜೀವನದಲ್ಲಿರುವವರ ಪಾಲಿಗೆ ಬೃಹತ್ ಪ್ರಮಾದಗಳಾಗಿ ಮಾರ್ಪಡುತ್ತವೆ. ತಮ್ಮ ಪಕ್ಷದ ಹಿರಿಯ ಮುಖಂಡರ ಒಂದು ತಪ್ಪು ಮಾತನ್ನು ಸಮರ್ಥಿಸಲು ಇಡೀ ದೇಶಾದ್ಯಂತ ಆಯಾ ಪಕ್ಷಗಳ ಕಾರ್ಯಕರ್ತರು ಪ್ರಯತ್ನಗಳನ್ನು ಮಾಡುತ್ತಾರೆ. ಇನ್ನೂ ಹಲವು ಬಾರಿ ಇವುಗಳ ಕುರಿತೆ ಹೆಚ್ಚಿನ ಚರ್ಚೆಗಳು ನಡೆದು ಅಭಿವೃದ್ಧಿ ಕಾರ್ಯಗಳೆಡೆಗಿನ ಚರ್ಚೆಗಳಿಗೆ ಅವಕಾಶವಿಲ್ಲದೆ ಹೋಗುತ್ತದೆ.ಇಲ್ಲಿ ದೇಶದ ಅಭಿವೃದ್ಧಿಯ ಕುರಿತಾದ ಕನಸನ್ನು ಹೊತ್ತು ಬಂದ ಅಭ್ಯರ್ಥಿಗಳ ಜೊತೆ ಜೊತೆಗೆ ಅಧಿಕಾರ ದಾಹಿ ಜನರು ಕೂಡ ಚುನಾವಣೆಯಲ್ಲಿ ಗೆದ್ದು ಬಂದಿರುತ್ತಾರೆ. ಇವರ ರಾಜಕೀಯ



**ವೀಣಾ ಹೇಮಂತಗೌಡ ಪಾಟೀಲ್, ಮುಂಡರಗಿ, ಗದಗ**

ಕೆಸರೆರಚಾಟದಲ್ಲಿ ಲಾಭವಾಗುವುದು ಇವರನ್ನು ಕರೆಸಿ ಪ್ಯಾನಲ್ ಡಿಸ್ಕಶನ್ ಮಾಡುವ, ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗಳನ್ನು ಏರ್ಪಡಿಸುವ ಜನರಿಗೆ ಮಾತ್ರ. ಕಾರ್ಯಕ್ರಮ ಮುಗಿದ ನಂತರ ಆ ಎಲ್ಲಾ ಪರ ವಿರೋಧ ಚರ್ಚೆ ಮಾಡುವವರು ಒಟ್ಟಿಗೆ ಕುಳಿತು ತಮಾಷೆ ಮಾಡುತ್ತಾ ಊಟ ಮಾಡಿ ಹೊರಟರೆ ಅವರವರ ಪಕ್ಷಗಳ ಕಾರ್ಯಕರ್ತರುತಂತಮ್ಮ ವಲಯಗಳಲ್ಲಿ ಈ ವಿಷಯದ ಕುರಿತಾಗಿ ಬಿಸಿ ಬಿಸಿ ವಾಗ್ವಾದಗಳನ್ನು ನಡೆಸಿ ಆ ವಾಗ್ವಾದಗಳು ತೀವ್ರ ಮನಸ್ತಾಪಕ್ಕೆ ಎಡೆ ಮಾಡಿ ಮುಂದೆ ವೈಯಕ್ತಿಕ ದ್ವೇಷಕ್ಕೆ ಕಾರಣವಾಗುತ್ತದೆ.

ಇನ್ನು ಕೆಲವು ಸಾಮಾಜಿಕ ಜಾಲತಾಣಗಳು ಕಲಿಕಾ ಕೇಂದ್ರಗಳಾಗಿ ಮಾರ್ಪಾಡಾಗಿವೆ ಇದು ಉನ್ನತ ಬದಲಾವಣೆ ಏನೋ ಸರಿ. ಲಕ್ಷಾಂತರ ಜನರು ತಮ್ಮ ಜ್ಞಾನದಾಹವನ್ನು ಹಿಂಗಿಸಿಕೊಳ್ಳಲು ದೂರ ಕಲಿಕೆಯಲ್ಲಿ ಹಲವಾರು ವಿಷಯಗಳಲ್ಲಿ ಪರಿಣತಿಯನ್ನು ಪಡೆಯಲು ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಳ್ಳುತ್ತಿದ್ದಾರೆ ಇದು ಕೂಡ ಒಳ್ಳೆಯ ಮನೆಯ ಚೌಕಟ್ಟಿನೊಳಗೆ ಇದ್ದುಕೊಂಡು ನಮ್ಮ ಉದ್ಯೋಗ ಮನೆ ಕೆಲಸಗಳ ಜೊತೆ ಜೊತೆಗೆ ದೂರ ಶಿಕ್ಷಣ ಪಡೆಯುವ ಮೂಲಕ ನಮ್ಮ ಜ್ಞಾನದ ಪರಿಧಿಯನ್ನು ವಿಸ್ತರಿಸಿಕೊಳ್ಳುತ್ತಿರುವುದು ಆರೋಗ್ಯಕರ ಬೆಳವಣಿಗೆ.

ಆದರೆ ತಮ್ಮ ಧರ್ಮವನ್ನು ಹೊಗಳುವ ನಿಟ್ಟಿನಲ್ಲಿ ಅನ್ಯ ಧರ್ಮವನ್ನು ತೆಗಳುವ, ಹೀಯಾಳಿಸುವ ಹಕ್ಕು ಯಾರಿಗೂ ಇಲ್ಲ. ಸಂವಿಧಾನ ಬದ್ಧ ಅಧಿಕಾರವನ್ನು ಹೊಂದಿರುವ ಎಲ್ಲ ಭಾರತೀಯ ಪ್ರಜೆಗಳು ಸರಿ ಸಮಾನರು ಎಂಬುದನ್ನು ನಾವು ಇಲ್ಲಿ ಮರೆತುಬಿಡುತ್ತೇವೆ ಇದಕ್ಕೆ ಕೂಡ ಜಾಲತಾಣಗಳು ಬಿತ್ತುವ ಅಪೂರ್ಣ ಮಾಹಿತಿಗಳೇ ಕಾರಣ.

ಎಲ್ಲೋ ನಡೆಯುವ ಒಂದು ಕೊಲೆ, ಮತ್ತೆಲ್ಲೋ ನಡೆಯುವ ಒಂದು ಬಾಲಾಪರಾಧ, ಒಬ್ಬ ವ್ಯಕ್ತಿಯ ವೈಯುಕ್ತಿಕ ಹನನ ದೇಶಾದ್ಯಂತ ಪ್ರಸಾರವಾಗಿ ಚರ್ಚೆಗೆ ಗ್ರಾಸವಾಗುತ್ತದೆ. ಇತ್ತೀಚಿಗಂತೂ ಸೆಲೆಬ್ರಿಟಿಗಳು ಎಂದು ಕರೆಯಲ್ಪಡುವ ಜನರ ಮನೆಯ ವೈಯುಕ್ತಿಕ ಸಮಾರಂಭಗಳು ಅವರ ಮಕ್ಕಳ ಜೀವನದ ಮೋಜು ಮಸ್ತಿಗಳು, ಮದುವೆ ವಿಚ್ಛೇದನಗಳಂತಹ ಸುದ್ದಿಗಳು ಹೆಚ್ಚು ಚರ್ಚೆಗೆ ಗ್ರಾಸವಾಗಲು ಕಾರಣ ಇಂತಹ ವಿಷಯಗಳು ಜನರ ಮನಸ್ಸನ್ನು ಸೆಳೆಯುತ್ತವೆ ಆ ಮೂಲಕ ತಮ್ಮ ಚಾನೆಲ್ನ ಟಿ ಆರ್ ಪಿ ಹೆಚ್ಚಿಸಿಕೊಳ್ಳಬಹುದು ಎಂಬ ವೈಯುಕ್ತಿಕ ಲಾಭದ ಲೆಕ್ಕಾಚಾರ. ಇನ್ನೂ ಹಲವಾರು ಬಾರಿ ಪ್ರಖ್ಯಾತ ವ್ಯಕ್ತಿಗಳ ಸಾವು ಮತ್ತು ಅದಕ್ಕೆ ಸಂಬಂಧಪಟ್ಟ ಹಲವಾರು ಘಟನೆಗಳು ಸುಮಾರು ಎರಡು ಮೂರು ದಿನಗಳ ಕಾಲ ಜಾಲತಾಣಗಳಲ್ಲಿ ಹರಿದಾಡುತ್ತಾ ಜನರು ಅವರ ಮನೆಯ ಸಂಕಟವನ್ನು ನೋವನ್ನು ಹಂಚಿಕೊಳ್ಳಲು ಬರುವ ನೂರಾರು ಸಾವಿರಾರು ಸೆಲೆಬ್ರಿಟಿಗಳನ್ನು ನೋಡಲು ಈ ಜಾಲತಾಣಗಳ ಮೊರೆ ಹೋಗುತ್ತಾರೆ. ಅಲ್ಲಿಯೂ ಕೂಡ ಕೆಲವರು ಶೋಕದ ಮನೆಯಲ್ಲಿ ಮರಣ ಹೊಂದಿದ ವ್ಯಕ್ತಿಯ ಬಳಿ ಹೋಗುವಾಗ ಕೂಡ ತಮ್ಮ ಮೊಬೈಲ್ ಕ್ಯಾಮೆರಾ ಮೂಲಕ ಚಿತ್ರೀಕರಣ ಮಾಡಿ ಅದನ್ನು ಸಾಮಾಜಿಕ ಜಾಲತಾಣಗಳಿಗೆ ಹರಿಬಿಡುತ್ತಾರೆ. ಇದೊಂದು ರೀತಿಯ ಗೀಳು ರೋಗವಾಗಿ ಪರಿಣಮಿಸಿದೆ.... ಪುಟ್ಟ ಪುಟ್ಟ ಮಕ್ಕಳಿಂದ ಹಿಡಿದು ಮುದುಕರವರೆಗೆ ಯಾವುದೇ ರೀತಿಯ ಹಿಂಜರಿಕೆಗಳಿಲ್ಲದೆ ಸಾಕಷ್ಟು ಜನರು ತಾವು ಕೂಡ ಕಾಲ ಪ್ರವಾಹದ ಹೊಸ ಅಲೆಯಲ್ಲಿ ತೇಲುತ್ತಿದ್ದೇವೆ ಎಂಬುದನ್ನು ತೋರಿಸಲೋಸುಗವೇ ತಮ್ಮದಲ್ಲದ, ತಾವು ಇದುವರೆಗೂ ಮಾಡಿರದ ತಮ್ಮ ಸಂಸ್ಕೃತಿಗೆ ಒಗ್ಗದ ದಿರಿಸುಗಳನ್ನು ಧರಿಸಿ ಚಿತ್ರ ವಿಚಿತ್ರವಾಗಿ ಆಡುವುದು ಒಂದು ಚೋದ್ಯವೇ ಸರಿ. ಯುವ ಜನತೆಯಂತೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಚಲನಚಿತ್ರಗಳಲ್ಲಿ ತೋರಿಸುವ ಗಿಚ್ಚ ಎಂದು ಹೇಳಲ್ಪಡುವ ಡೈಲಾಗುಗಳನ್ನು ತಾವೇ ಅಭಿನಯಿಸಿ ಖುಷಿಪಡುತ್ತಾರೆ. ಒಂದು ಹಂತದವರೆಗೆ ಇವೆಲ್ಲವೂ ಸರಿಯೇ ಎಷ್ಟೋ ಬಾರಿ ಈ ರೀತಿ ನಿರಂತರ ಪ್ರಯತ್ನ ಮಾಡಿದ ವ್ಯಕ್ತಿ ತನ್ನ ಅಭಿನಯದಲ್ಲಿ ಪರಿಣಿತಿ ಪಡೆಯಬಹುದು ಇನ್ನು ಕೆಲವರು ತಮ್ಮ ಲ್ಲಿ ಹುದುಗಿದ ಪ್ರತಿಭೆಗಳನ್ನು ಹೊರಹಾಕಬಹುದು ಆದರೆ ಮತ್ತೆ ಕೆಲವರು ತಮ್ಮನ್ನು ತಾವು ವೈಭವಿಕರಿಸಿಕೊಳ್ಳುವ ಭರದಲ್ಲಿ ಸಾಮಾಜಿಕ ಶಿಷ್ಟಾಚಾರಗಳನ್ನು ಮರೆಯುತ್ತಾರೆ.

ಎಷ್ಟೋ ಬಾರಿ 24 /7 ಲಭ್ಯವಾಗುವ ಚಾನೆಲ್ಗಳಲ್ಲಿ ತೋರಿಸಲು ಏನೂ ಇಲ್ಲದೆ ಇದ್ದಾಗ ಪಾಪ ಅವರಾದರೂ ಏನು ಮಾಡಿಯಾರು!! ಈ ಹಿಂದೆ ಅತಿ ಹೆಚ್ಚು ವೀಕ್ಷಿಸಲ್ಪಟ್ಟ ವಿಡಿಯೋಗಳನ್ನು, ಸುದ್ದಿಗಳನ್ನು ಮತ್ತೆ ಮತ್ತೆ ಮರು ಪ್ರಸಾರ ಮಾಡುತ್ತಾರೆ. ನೋಡುವವರು ಇರುವವರೆಗೂ ಇದು ನಡೆಯುತ್ತಲೇ ಇರುತ್ತದೆ. ವಿವಿಧ ಆಯಾಮಗಳಿಂದ ದುರ್ಘಟನೆಗಳನ್ನು , ದುರ್ವ್ಯವಹಾರಗಳನ್ನು,ಅಶ್ಲೀಲ ವಿಷಯಗಳನ್ನು ಪದೇ ಪದೇ ಚರ್ಚಿಸುವುದು ಮನೆಯವರೆಲ್ಲರ ಜೊತೆ ಕುಳಿತು ವೀಕ್ಷಿಸಲು ಸಾಧ್ಯವಿಲ್ಲದಂತಹ ವಿಡಿಯೋಗಳು ಮತ್ತೆ ಮತ್ತೆ ಪ್ರಸಾರಗೊಳ್ಳುವ ಮೂಲಕ ಮನೆ ಮನೆಗಳಲ್ಲಿ ಮಕ್ಕಳು ಹಿರಿಯರೆನ್ನದೆ ಎಲ್ಲರೂ ಇವುಗಳಿಗೆ ಬಲಿಪಶು ಆಗಿರುವುದು.

**ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರಾರು??**

* ಚಲನಚಿತ್ರಗಳನ್ನ ಬಿಡುಗಡೆ ಮಾಡುವ ಮುನ್ನ ಅವುಗಳನ್ನು ಸೆನ್ಸಾರ್ ಮಂಡಳಿಯು ಪರಿಶೀಲಿಸಿ ಅನಗತ್ಯ ದೃಶ್ಯಗಳಿಗೆ ಕತ್ತರಿ ಪ್ರಯೋಗ ಮಾಡುವಂತೆಯೇ ಈ ರೀತಿಯ ವಿಷಯಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ಪ್ರಕಟವಾಗುವ ಮುನ್ನ ವಾರ್ತಾ ಮತ್ತು ಪ್ರಸಾರ ಇಲಾಖೆಯ ಅನುಮತಿ ಕಡ್ಡಾಯವಾಗಿ ಇರಬೇಕು.
* ಮನೆ ಮಂದಿಯೆಲ್ಲಾ ಕುಳಿತು ನೋಡುವಂತಹ ಕಾರ್ಯಕ್ರಮಗಳನ್ನು ಪ್ರಸಾರ ಮಾಡಬೇಕು. ಈ ಜಗತ್ತಿನಲ್ಲಿ ಕೆಟ್ಟದ್ದು ಇರುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಒಳ್ಳೆಯ ವಿಷಯಗಳು ಇವೆ. ಅವುಗಳನ್ನು ಹೆಚ್ಚು ಹೆಚ್ಚಾಗಿ ಪ್ರಸರಿಸುವುದರಿಂದ ಧನಾತ್ಮಕ ಸಮಾಜ ನಿರ್ಮಾಣಕ್ಕೆ ಅನುವು ಮಾಡಿಕೊಟ್ಟಂತಾಗುತ್ತದೆ.
* ನಮ್ಮ ದೇಶದ ಸಂಸ್ಕೃತಿ, ಇತಿಹಾಸ, ವೈಜ್ಞಾನಿಕ ಮತ್ತು ಸಾಮಾಜಿಕ ವಿಷಯಗಳ ಕುರಿತಾದ ಮಾಹಿತಿಗಳನ್ನು ಹಂಚಿಕೊಳ್ಳುವ ಕಾರ್ಯ ಸಾಮಾಜಿಕ ಜಾಲತಾಣಗಳಿಂದ ಆಗಬೇಕು.
*ಯಾವುದನ್ನು ವೈಭವೀಕರಿಸದೆ ವಸ್ತು ಸ್ಥಿತಿಯನ್ನು ಹೇಳುವಂತಹ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವಂತೆ ಕ್ರಮ ಕೈಗೊಳ್ಳಬೇಕು.

ಇದೆಲ್ಲದರ ಜೊತೆಗೆ ಮುಖ್ಯವಾಗಿ..... ಸಾಮಾಜಿಕ ಜಾಲತಾಣಗಳನ್ನು ಎಷ್ಟರಮಟ್ಟಿಗೆ ಬಳಸಬೇಕು ಎಂಬ ಬಗ್ಗೆ ಜನರಲ್ಲಿ ಅರಿವು ಮೂಡಬೇಕು. ಅರಿವಿನ ಆಚಾರ ಉನ್ನತ ಬದುಕಿಗೆ ಸೋಪಾನವಾಗುತ್ತದೆ. ಊಟದಲ್ಲಿ ಉಪ್ಪಿನಕಾಯಿ ಇರಬೇಕೆ ಹೊರತು ಉಪ್ಪಿನಕಾಯಿಯೇ ಊಟವಾಗಬಾರದು ಅಂತೆಯೇ ಬದುಕಿಗೆ ಸುದ್ದಿಗಳು ಬೇಕೆ ಹೊರತು ಅವುಗಳೇ ಬದುಕಾಗಬಾರದು ಎಂಬುದನ್ನು ಅರಿತು ಸಾಮಾಜಿಕ ಜಾಲತಾಣಗಳನ್ನು ನಾವು ಬಳಸಿಕೊಳ್ಳಬೇಕು. ಬೇಕು ಬೇಡಗಳ ಆಯ್ಕೆ ನಮ್ಮದಾಗಿರಬೇಕು. ಆ ನಿಟ್ಟಿನಲ್ಲಿ ನಮ್ಮ ಪ್ರಯತ್ನ ಸಾಗಲಿ ಎಂಬ ಆಶಯದೊಂದಿಗೆ.

# ಕವಿ ಮನಸು

## ದೀನರನ್ನು ಕಾಡಬೇಡ



ನಿತ್ಯ ಕದ್ದು ಹಾಲು ಕುಡಿವ
ಬೆಕ್ಕು ಕೊಬ್ಬಿಕೊಂಡಿದೆ
ಮೂತಿಯಲ್ಲಿ ಮೆತ್ತಿಕೊಂಡ
ಹಾಲನೆಕ್ಕತೊಡಗಿದೆ

ಮನೆಯ ಒಡತಿ ಏಟು ಕೊಡಲು
ಕಿಟಕಿಯಿಂದ ಹಾರಿತು
ಬೆಕ್ಕು ಹೆದರಿ ಓಡಿ ಹೋಗಿ
ಬಯಲಿನಲ್ಲಿ ಕುಳಿತಿತು

ನಡುಗುತಿರುವ ಅದನು ಕಂಡು
ಹಕ್ಕಿ ಕೆಣಕತೊಡಗಿತು
ನಿನಗೆ ತಕ್ಕ ಶಿಕ್ಷೆಯಾಯ್ತು
ಎಂದು ಕುಹಕವಾಡಿತು

ಪಕ್ಷಿ ನುಡಿದ ಮಾತು ಕೇಳಿ
ಬೆಕ್ಕು ರೋಷಗೊಂಡಿತು
ಏಟು ತಿಂದ ನೋವಿನಲ್ಲಿ
ಬೆಕ್ಕು ನರಳುತಿದ್ದಿತು

ತನಗೆ ಶಕ್ತಿ ಇರುವುದೆಂಬ
ಜಂಭ ತೋರಬಾರದು
ದೀನ ಜನಕೆ ಕಾಟ ಕೊಡಲು
ಮುಂದೆ ಶಿಕ್ಷೆ ತಪ್ಪದು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಕಪ್ಪು ಬಿಳುಪಿನ ಚಿತ್ರಪಟ.

ಅಲ್ಲೊಂದು ಕಪ್ಪು ಬಿಳುಪಿನ ಚಿತ್ರಪಟ
ಬಣ್ಣ ತುಂಬಲು ಕಲಾವಿದನ
ಕುಂಚ ಮಾಡುತ್ತಿದೆ ಹಠ.
ಬಣ್ಣವಿಲ್ಲದ ಚಿತ್ರಕ್ಕೆ ಬೆಲೆಯಿಲ್ಲ.
ಆದರೆ ಕಪ್ಪು ಬಿಳುಪಿಲ್ಲದೆ
ಬೇರೆ ಬಣ್ಣಗಳೇ ಇಲ್ಲ.
ಬಣ್ಣದ ಜಗತ್ತನು ಕಾಣುವ
ಕಣ್ಣುಗಳ ಬಣ್ಣ ಕಪ್ಪು ಬಿಳುಪು.
ಇನ್ನು ಕಪ್ಪು ಬಿಳುಪಿನ ಚಿತ್ರಪಟಕ್ಕೆ
ಇದೇ ಅದರದೇ ಹೊಳಪು.
ಇದು ಬರೀ ಚಿತ್ರಪಟವಲ್ಲ
ಕಾಲಗಳನ್ನು ಮನವರಿಸುವ ನೆನಪು.

– ಮಂಜುಶ್ರೀ ಮುರಳೀಧರ್.
ತೋರಣಗಲ್ಲು, ಬಳ್ಳಾರಿ.

## ತುಂಗಭದ್ರಾ ನೀರಿನ ಮಟ್ಟ



| ಸೋಮವಾರ: 05–02–2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.17 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 271 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 9.570 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1614.82 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 9832 ಕ್ಯುಸೆಕ್ |
| ಸಾಮರ್ಥ್ಯ | 47.991 ಟಿಎಂಸಿ |

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಕರ್ತವ್ಯಕ್ಕೆ ಮಾನಸಿಕವಾಗಿ ಸಿದ್ಧರಾಗಿ

**ಡಿಸಿ ನಲಿನ್ ಅತುಲ್ ಹೇಳಿಕೆ | ಅತಿ ಸಣ್ಣ ವಿಷಯದ ನಿರ್ಲಕ್ಷ್ಯವೂ ದೊಡ್ಡ ಪರಿಣಾಮ ಬೀರಬಹುದು**

■ **ಹಂಪಿ ಟೈಮ್ಸ್ ಕೊಪ್ಪಳ**

ಚುನಾವಣಾ ಕರ್ತವ್ಯ ಬಹಳ ಸೂಕ್ಷ್ಮತೆಯಿಂದ ಕೂಡಿರುತ್ತದೆ. ಅತಿ ಸಣ್ಣ ವಿಷಯವೂ, ನಿರ್ಲಕ್ಷ್ಯವೂ ಬಹಳ ದೊಡ್ಡ ಪರಿಣಾಮ ಬೀರಬಹುದು. ಆದ್ದರಿಂದ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಿದ ಅಧಿಕಾರಿ, ಸಿಬ್ಬಂದಿಗಳು ಈಗಿಂದಲೇ ಚುನಾವಣಾ ಕರ್ತವ್ಯಕ್ಕೆ ಮಾನಸಿಕವಾಗಿ ಸಿದ್ಧರಾಗಿ ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಹೇಳಿದರು.



ಸೋಮವಾರದಂದು ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಜಿಲ್ಲಾ ಚುನಾವಣಾ ಕಾರ್ಯಾಲಯದಿಂದ ಸೆಕ್ಟರ್ ಅಧಿಕಾರಿಗಳಿಗೆ ಹಾಗೂ ಸೆಕ್ಟರ್ ಪೊಲೀಸ್ ಅಧಿಕಾರಿಗಳಿಗೆ ಆಯೋಜಿಸಲಾಗಿದ್ದ ತರಬೇತಿ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಸೆಕ್ಟರ್ ಅಧಿಕಾರಿಗಳಿಗೆ ನಿರ್ದಿಷ್ಟ ಸಂಖ್ಯೆಯ ಮತಗಟ್ಟೆಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಚುನಾವಣಾ ಪೂರ್ವ ಸಿದ್ಧತೆಯ ಅಂಗವಾಗಿ ಸೆಕ್ಟರ್ ಅಧಿಕಾರಿಗಳು ತಮಗೆ ಹಂಚಿಕೆ ಮಾಡಿದ ಎಲ್ಲ ಮತಗಟ್ಟೆಗಳಿಗೆ ಭೇಟಿ ನೀಡಿ, ಅಲ್ಲಿನ ಮೂಲಭೂತ ಸೌಕರ್ಯಗಳು, ಮತದಾರರ ಪಟ್ಟಿ, ಮಹಿಳಾ ಮತ್ತು ಪುರುಷ ಮತದಾರರ ಸಂಖ್ಯೆ, ಅದರಲ್ಲಿ ವಯೋವೃದ್ಧರು, ವಿಕಲಚೇತನರ ಸಂಖ್ಯೆ, ಮತಗಟ್ಟೆಯ ಸೂಕ್ಷ್ಮತೆ, ಈ ಹಿಂದೆ ಮತಗಟ್ಟೆಯಲ್ಲಿ ನಡೆದ ಗಲಾಟೆ, ದ್ವಂದ್ವ ಅಥವಾ ಘರ್ಷಣೆ ಮುಂತಾದವುಗಳ ಕುರಿತು ಮುಂಚಿತವಾಗಿಯೇ ಪರಿಶೀಲಿಸಬೇಕು. ಸೂಕ್ಷ್ಮ ಮತಗಟ್ಟೆಗಳ ಬಗ್ಗೆ ಹೆಚ್ಚಿನ ನಿಗಾ ವಹಿಸಿ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಸರಳ ಮತದಾನ ಪ್ರಕ್ರಿಯೆ ನಡೆಸಲು ಅಗತ್ಯವಾದ ಎಲ್ಲ ಸಿದ್ಧತೆಗಳನ್ನು ಮತಗಟ್ಟೆಗೆ ಒದಗಿಸಲು ಸೆಕ್ಟರ್ ಅಧಿಕಾರಿಗಳು ಕ್ರಮ ವಹಿಸಬೇಕು. ಯಾವುದೇ ಗೊಂದಲ, ಪ್ರಶ್ನೆಗಳು ಉಂಟಾದಾಗ ಚುನಾವಣಾ ಮೇಲಾಧಿಕಾರಿಗಳನ್ನು ಸಂಪರ್ಕಿಸಿ ಮಾಹಿತಿ, ಸಲಹೆ ಪಡೆದು ಕಾರ್ಯನಿರ್ವಹಿಸಬೇಕು. ಇದೆಲ್ಲವನ್ನೂ ಮಾಡಲು ಮುಖ್ಯವಾಗಿ ಅಧಿಕಾರಿಗಳು ಚುನಾವಣಾ ಕರ್ತವ್ಯಕ್ಕೆ ಮಾನಸಿಕವಾಗಿ ಸಿದ್ಧರಾಗಿರಬೇಕು. ಇದರಿಂದ ಚುನಾವಣಾ ಕರ್ತವ್ಯದ ಒತ್ತಡದಿಂದ ಪಾರಾಗಬಹುದು. ಮುಂಚಿತವಾಗಿ ಎಲ್ಲ ಅಗತ್ಯ ಸಿದ್ಧತೆಗಳನ್ನು ಕೈಗೊಂಡಾಗ ಒತ್ತಡದ ಕಾರ್ಯನಿರ್ವಹಣೆಗೆ ಅವಕಾಶವಿರುವುದಿಲ್ಲ. ಆದ್ದರಿಂದ ಚುನಾವಣಾ ಸಂಬಂಧಿತ ಎಲ್ಲ ತರಬೇತಿ, ಕಾರ್ಯಾಗಾರ, ಸಭೆಗಳಿಗೆ ತಪ್ಪದೇ ಹಾಜರಾಗಿ ನಿಮ್ಮ ಗೊಂದಲಗಳಿಗೆ ಪರಿಹಾರ ಕಂಡುಕೊಂಡು, ಸುಗಮ ಚುನಾವಣೆಗಳಿಗೆ ಸಹಕರಿಸಿ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.




ಜಿಲ್ಲಾ ತರಬೇತ ಕೇಂದ್ರದ ಪ್ರಾಚಾರ್ಯರು ಹಾಗೂ ತರಬೇತಿದಾರರಾದ ಕೃಷ್ಣಮೂರ್ತಿ ದೇಸಾಯಿ ಅವರು ಮಾತನಾಡಿ, ಚುನಾವಣಾ ಮುನ್ನಾದಿನ ಪ್ರತಿ ಮತಗಟ್ಟೆಯ ಸುವ್ಯವಸ್ಥೆ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು. ಚುನಾವಣಾ ದಿನ ಅಣಕು ಮತದಾನವನ್ನು ಕಡ್ಡಾಯವಾಗಿ ನಡೆಸಬೇಕು. ಇದರಿಂದ ವಿವಿ ಪ್ಯಾಟ್‌ಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಲು ಸಹಾಯಕವಾಗುತ್ತದೆ. ಪೋಲಿಂಗ್ ಏಜೆಂಟ್‌ಗಳ ಹಾಜರಿ, ಗೈರು ಹಾಜರಿ ಬಗ್ಗೆ ಸೆಕ್ಟರ್ ಅಧಿಕಾರಿಗಳಿಗೆ ಮಾಹಿತಿ ಇರಬೇಕು. ಅಗತ್ಯ ಪೊಲೀಸ್ ಭದ್ರತೆಗೆ ಕ್ರಮ ವಹಿಸಬೇಕು. ಸೆಕ್ಟರ್ ಅಧಿಕಾರಿಗಳು ನಿಗದಿಪಡಿಸಿದ ನಮೂನೆಗಳಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಕಾಲಕಾಲಕ್ಕೆ ವರದಿ ಸಲ್ಲಿಸಬೇಕು. ಸೆಕ್ಟರ್ ಅಧಿಕಾರಿಗಳಿಗೆ ಮತದಾನ ದಿನದ 7 ದಿನಗಳ ಮೊದಲು ವಲಯ ಮ್ಯಾಜೇಸ್ಟ್ರೇಟ್ ಅಧಿಕಾರಿಯ ಅಧಿಕಾರವನ್ನು ನೀಡಲಾಗುತ್ತದೆ. ಮತಗಟ್ಟೆಗಳ ವ್ಯಾಪ್ತಿಯಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡಲು, ಯಾವುದೇ ತೊಂದರೆ ಉಂಟಾದಲ್ಲಿ ಅವುಗಳನ್ನು ಪರಿಹರಿಸಲು ಅಧಿಕಾರಿಗಳು ತಮ್ಮ ಅಧಿಕಾರವನ್ನು ಬಳಸಿಕೊಳ್ಳಬಹುದು ಎಂದು ಸೆಕ್ಟರ್ ಅಧಿಕಾರಿಗಳ ಕರ್ತವ್ಯ, ಜವಾಬ್ದಾರಿಗಳ ಬಗ್ಗೆ ಮಾಹಿತಿ ನೀಡಿದರು.

ತರಬೇತಿ ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ಹೆಚ್ಚುವರಿ ಎಸ್‌ಪಿ ಹೇಮಂತ್‌ಕುಮಾರ್, ಕೊಪ್ಪಳ ವಿಭಾಗ ಡಿವೈಎಸ್‌ಪಿ ಮುತ್ತಣ್ಣ ಸವರಗೋಳ, ಚುನಾವಣಾ ಶಾಖೆಯ ನಾಗರಾಜ, ಪ್ರಸನ್ನ ಸೇರಿದಂತೆ ನಿಯೋಜಿತ ಸೆಕ್ಟರ್ ಅಧಿಕಾರಿಗಳು, ಸೆಕ್ಟರ್ ಪೊಲೀಸ್ ಅಧಿಕಾರಿಗಳು ಹಾಜರಿದ್ದರು.

**ವಿವಿ ಪ್ಯಾಟ್ ಕುರಿತ ಪ್ರಾತ್ಯಕ್ಷಿಕೆ:** ತರಬೇತಿಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ವಿವಿ ಪ್ಯಾಟ್ ಬಳಕೆ, ಮಸ್ಟರಿಂಗ್, ಡಿ–ಮಸ್ಟರಿಂಗ್ ಕುರಿತು ತಾಂತ್ರಿಕ ಮಾಹಿತಿಯ ಬಗ್ಗೆ ಮಾಸ್ಟರ್ ತರಬೇತುದಾರರಿಂದ ಪ್ರಾತ್ಯಕ್ಷಿಕೆ ನೀಡಲಾಯಿತು.

# ಸಂವಿಧಾನ ಜಾಗೃತಿ ಜಾಥ



■ **ಹಂಪಿ ಟೈಮ್ಸ್ ರಾಯಚೂರು**

ಫೆ.05ರಂದು ಬಲ್ಲಟಗಿ ಗ್ರಾಮ ಪಂಚಾಯತಿಯಿಂದ ಕೆ.ಗುಡದಿನ್ನಿ ಗ್ರಾಮ ಪಂಚಾಯತಿಗೆ ಸಂವಿಧಾನ ಜಾಗೃತಿ ಜಾಥವನ್ನು ಹಸ್ತಾಂತರಿಸಲಾಯಿತು. ಕೆ.ಗುಡದಿನ್ನಿ ಗ್ರಾಮ ಪಂಚಾಯತಿಯಲ್ಲಿ ಮಹಿಳೆಯರು ಶಾಲಾ ಮಕ್ಕಳಿಂದ ಕಳಸ ಕುಂಭಗಳನ್ನೊತ್ತು ಅದ್ದೂರಿಯಾಗಿ ಜಾಥವನ್ನು ಸ್ವಾಗತಿಸಲಾಯಿತು.

ಬಲ್ಲಟಗಿ ಗ್ರಾಮ ಪಂಚಾಯತಿಯಲ್ಲಿ ಸಂವಿಧಾನ ಜಾಗೃತಿ ಜಾಥವನ್ನು ಮುಗಿಸಿ ಕೆ.ಗುಡದಿನ್ನಿ ಗ್ರಾಮ ಪಂಚಾಯತಿಯಲ್ಲಿ ಸಂಚಾರವನ್ನು ಆರಂಭಿಸಿತು. ಕೆ.ಗುಡದಿನ್ನಿ ಗ್ರಾಮ ಪಂಚಾಯತಿ, ಹರವಿ, ಮಾಡಗಿರಿ, ಚಾಗಬಾವಿ, ಗಣದಿನ್ನಿ, ಕಲ್ಲೂರು ಹಾಗೂ ಅತ್ತನೂರು ಗ್ರಾಮ ಪಂಚಾಯತಿಯಲ್ಲಿ ಸಂಚರಿಸಿತು.

ನಂತರ ಅತ್ತನೂರು ಗ್ರಾಮ ಪಂಚಾಯತಿಯಿಂದ ಸಿರವಾರ ಪಟ್ಟಣಕ್ಕೆ ಸಂವಿಧಾನ ಜಾಗೃತಿ ಜಾಥವನ್ನು ಅತ್ಯಂತ ಅದ್ದೂರಿಯಿಂದ ಸ್ವಾಗತಿಸಿ, ಗ್ರಾಮ ಪಂಚಾಯತಿಯ ಅಧಿಕಾರಿಗಳು ಗ್ರಾಮದ ಮುಖಂಡರು, ಗ್ರಾಮಸ್ಥರು, ವಿವಿಧ ಸಂಘ ಸಂಸ್ಥೆಗಳ ಮುಖಂಡರು ಹಾಗೂ ಶಾಲಾ ಮಕ್ಕಳು, ಶಿಕ್ಷಕರು ಅಂಗನವಾಡಿ, ಆಶಾ ಕಾರ್ಯಕರ್ತೆಯರು ಸ್ತಬ್ಧಚಿತ್ರದಲ್ಲಿರುವ ಡಾ.ಬಿ.ಆರ್ ಅಂಬೇಡ್ಕರ್ ಪುತ್ಥಳಿ, ಭಾವಚಿತ್ರಕ್ಕೆ ಹಾಗೂ ಸಂವಿಧಾನ ಪೀಠಿಕೆಗೆ ಪೂಜೆ ಸಲ್ಲಿಸಿ, ಸಂವಿಧಾನ ಪೀಠಿಕೆ ವಾಚನ ಮಾಡಿದರು.

ಪಟ್ಟಣದಲ್ಲಿ ಎಲ್.ಇ.ಡಿ ಪರದೆಯ ಮೂಲಕ ಸಂವಿಧಾನದ ಕುರಿತು ವಿಡಿಯೋ ಕ್ಲಿಪಿಂಗ್‌ಗಳನ್ನು ಪ್ರದರ್ಶಿಸಲಾಯಿತು. ವಿವಿಧ ಸ್ಪರ್ಧೆಗಳ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು. ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

# ಫೆ.13 ರಿಂದ ಸಾರ್ವಜನಿಕರ ಕುಂದುಕೊರತೆಗಳ ಸ್ವೀಕಾರ

■ **ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ಲೋಕಾಯುಕ್ತ ಬಳ್ಳಾರಿ ವಿಭಾಗದಿಂದ ಜಿಲ್ಲೆಯ ಸಿರುಗುಪ್ಪ, ಬಳ್ಳಾರಿ ಮತ್ತು ಕಂಪ್ಲಿ ತಾಲ್ಲೂಕು ಕೇಂದ್ರಗಳಲ್ಲಿ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಕುಂದುಕೊರತೆಗಳ ಅಹವಾಲುಗಳ ಸ್ವೀಕಾರ/ಜನ ಸಂಪರ್ಕ ಸಭೆಯನ್ನು ಫೆ.13 ರಿಂದ ಹಮ್ಮಿಕೊಳ್ಳಲಾಗಿದೆ ಎಂದು ಬಳ್ಳಾರಿ ವಿಭಾಗ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸಿದ್ಧರಾಜು.ಸಿ ಅವರು ತಿಳಿಸಿದ್ದಾರೆ.

ಫೆ.13 ರಂದು ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 02 ರವರೆಗೆ ಸಿರುಗುಪ್ಪದ ಸಿಡಿಪಿಒ ಕಚೇರಿ ಸಭಾಂಗಣ, ಫೆ.14 ರಂದು ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 02 ರವರೆಗೆ ಬಳ್ಳಾರಿ ತಾಲ್ಲೂಕು ಕಚೇರಿ ಸಭಾಂಗಣ ಮತ್ತು ಫೆ.15 ರಂದು ಕಂಪ್ಲಿ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಸಾರ್ವಜನಿಕರ ಕುಂದುಕೊರತೆಗಳ ಅಹವಾಲುಗಳ ಸ್ವೀಕಾರ/ಜನ ಸಂಪರ್ಕ ಸಭೆ ನಡೆಯಲಿದೆ.

ಕುಂದು ಕೊರತೆಗಳಿರುವ ಸಾರ್ವಜನಿಕರು ನಿಗದಿತ ದಿನ ಮತ್ತು ಸ್ಥಳದಲ್ಲಿ ತಮ್ಮ ದೂರು ಅರ್ಜಿಗಳನ್ನು ನೀಡಬಹುದು. ಕುಂದುಕೊರತೆಗಳ ಅಹವಾಲುಗಳ ಅರ್ಜಿಗಳನ್ನು ಸ್ವೀಕರಿಸಿ, ವಿಚಾರಿಸಲಾಗುತ್ತದೆ. ಕರ್ನಾಟಕ ಲೋಕಾಯುಕ್ತ ಬೆಂಗಳೂರು ವಿಭಾಗ ಲೋಕಾಯುಕ್ತರಿಗೆ ಅರ್ಜಿ ಸಲ್ಲಿಸಲು ನಮೂನೆ/ಫಾರಂ ನಂ:01 ಮತ್ತು 02 ಗಳನ್ನು ನೀಡಲಾಗುವುದು ಎಂದು ತಿಳಿಸಿದ್ದಾರೆ.

# ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿ

**ಸಚಿವ ರಹೀಂ ಖಾನ್ ಸೂಚನೆ | ಯಾವುದೇ ಕಾರಣಕ್ಕೂ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಿ**



■ **ಹಂಪಿ ಟೈಮ್ಸ್ ರಾಯಚೂರು**

ಜಿಲ್ಲೆಯಲ್ಲಿ ಯಾವುದೇ ಕಾರಣಕ್ಕೂ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳುವುದು ಆಯಾ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ ಮತ್ತು ಕಡ್ಡಾಯವಾಗಿ ನೀರಿನ ಸಮಸ್ಯೆ ಹೆಚ್ಚಾಗಿರುವ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ನೀರಿನ ಸಮಸ್ಯೆಯನ್ನು ಬಗೆಹರಿಸಲು ಅಧಿಕಾರಿಗಳು ಕಾರ್ಯನಿರ್ವಹಿಸಬೇಕೆಂದು ಪೌರಾಡಳಿತ ಹಾಗೂ ಹಜ್ ಸಚಿವ ರಹೀಂ ಖಾನ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅವರು ಸೋಮವಾರ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ವ್ಯಾಪ್ತಿಯ ನಗರ ಸ್ಥಳೀಯ ಸಂಸ್ಥೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬೇಸಿಗೆಗಾಲ ಆರಂಭವಾಗುತ್ತಿದ್ದು, ಕುಡಿಯುವ ನೀರಿನ ಕೊರತೆಯಾಗುವ ಸಾಧ್ಯತೆಯಿದೆ. ತೀವ್ರ ಕುಡಿಯುವ ನೀರಿನ ಸಮಸ್ಯೆಯಿರುವ ಸ್ಥಳಗಳಿಗೆ ಖುದ್ದು ಸಂಬಂಧಪಟ್ಟ ಅಧಿಕಾರಿಗಳು ತೆರಳಿ ಸ್ಥಳಪರಿಶೀಲನೆ ನಡೆಸಬೇಕು ಮತ್ತು ಜನರಿಗೆ ಯಾವುದೇ ರೀತಿಯಿಂದಲೂ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಕುಡಿಯುವ ನೀರಿನ ಸಮಸ್ಯೆ ಕಂಡುಬಂದಲ್ಲಿ ಟ್ಯಾಂಕರ್ ಅಥವಾ ಬೋರ್‌ವೆಲ್‌ಗಳ ಮೂಲಕ ಜನರಿಗೆ ನೀರೊದಗಿಸುವ ಕಾರ್ಯವಾಗಬೇಕು. ಕುಡಿಯುವ ನೀರಿನ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಯಾವುದೇ ಲೋಪದೋಷಗಲಾಗದಂತೆ ಕರ್ತವ್ಯ ನಿರ್ವಹಿಸಬೇಕು ಒಂದು ವೇಳೆ ಸಮಸ್ಯೆ ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳೇ ನೇರ ಹೊಣೆಯಾಗುತ್ತಾರೆ ಎಂದರು.

ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದು ಸರ್ಕಾರದ ಮುಖ್ಯ ಜವಾಬ್ದಾರಿಯಾಗಿರುತ್ತದೆ. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಅಧಿಕಾರಿಗಳು ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಬೇಕೆಂದು ತಿಳಿಸಿದರು.

ಜಿಲ್ಲೆಯಲ್ಲಿರುವ ಇಂದಿರಾ ಕ್ಯಾಂಟೀನ್‌ಗಳ ಮೂಲಕ ಜನರಿಗೆ ಉತ್ತಮ ಆಹಾರವನ್ನು ನೀಡಲಾಗುತ್ತಿದ್ದು, ಈಗಾಗಲೇ ಜಿಲ್ಲೆಯಲ್ಲಿ ತಾಲೂಕು ಮಟ್ಟದಲ್ಲಿ ಇಂದಿರಾ ಕ್ಯಾಂಟೀನ್‌ಗಳಿದ್ದು, ಹೊಸದಾಗಿ ಜಿಲ್ಲೆಗೆ ಐದು ಇಂದಿರಾ ಕ್ಯಾಂಟೀನ್‌ಗಳಿಗೆ ಅನುಮೋದನೆ ಸಿಕ್ಕಿದ್ದು, ಮುಂದಿನ ದಿನಗಳಲ್ಲಿ ಕ್ಯಾಂಟೀನ್ ಸ್ಥಾಪನೆಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್‌ಬೋಸರಾಜು, ಜಿಲ್ಲಾಧಿಕಾರಿ ಎಲ್.ಚಂದ್ರಶೇಖರ ನಾಯಕ, ನಗರಾಭಿವೃದ್ಧಿ ಇಲಾಖೆಯ ಜಂಟಿ ಕಾರ್ಯದರ್ಶಿ ವೆಂಕಟರಮಣರೆಡ್ಡಿ, ಪೌರಾಡಳಿತ ನಿರ್ದೇಶನಾಲಯದ ಜಂಟಿ ನಿರ್ದೇಶಕ ರುದ್ರಮುನಿ, ಪೌರಾಡಳಿತ, ಹಜ್ ಸಚಿವರ ಆಪ್ತ ಕಾರ್ಯದರ್ಶಿ ಡಾ.ಕೆ.ಮುರುಳಿಧರ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಜಗದೀಶ ಗಂಗಣ್ಣನವರ, ನಗರಸಭೆ ಪೌರಾಯುಕ್ತ ಗುರುಸಿದ್ದಯ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಸುರಕ್ಷಾ ಕಿಟ್ ವಿತರಣೆ



■ **ಹಂಪಿ ಟೈಮ್ಸ್ ರಾಯಚೂರು**

ನಗರಸಭೆ ವತಿಯಿಂದ ಫೆ.5ರಂದು ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್ ಅವರು ಪುಷ್ ಕಾರ್ಟ್‌ಗಳನ್ನು ಉದ್ಘಾಟಿಸಿ ನಂತರ ಪೌರ ಕಾರ್ಮಿಕರಿಗೆ ಬೂಟ್‌ಗಳು, ಮಾಸ್ಕ್, ಸುರಕ್ಷಾ ಗ್ಲೌಸ್‌ಗಳು ಸೇರಿದಂತೆ ಇನ್ನಿತರ ಸುರಕ್ಷತಾ ಕಿಟ್‌ಗನ್ನು ವಿತರಿಸಿದರು.

ನಗರಸಬೆಯಿಂದ ಒಟ್ಟು 400 ಗಮ್ ಬೂಟ್ಸ್, 500 ಥರ್ಮಿಸ್ಟೋ ಮಾಸ್ಕ್, 300 ಪುಟ್ಟಿಗಳು, 30 ಕ್ರೂ ಬಾರ್, 400 ಸುರಕ್ಷಾ ಗ್ಲೌಸ್, 500 ಸುರಕ್ಷಾ ಜಾಕೇಟ್‌ಗಳು, ಒಣ ಕಸ ಸಂಗ್ರಹಣೆಗೆ ಥಾರ್ಪೋಲಿನ್ ಚೀಲಗಳು, 20 ಕಸ ಸಂಗ್ರಹಣ ಬುಟ್ಟಿಗಳು, 400 ಹೆಲ್ಮೆಟ್‌ಗಳು, 500 ಸಲಾಕೆಗಳನ್ನು ವಿತರಿಸಲಾಯಿತು. ಜೊತೆಗೆ 48 ಕಸ ಸಂಗ್ರಹಣೆಗೆ ತಳ್ಳುವ ಬಂಡಿಗಳನ್ನು ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್ ಬೋಸರಾಜು, ನಗರ ಶಾಸಕ ಡಾ. ಎಸ್.ಶಿವರಾಜ ಪಾಟೀಲ್, ಜಿಲ್ಲಾಧಿಕಾರಿ ಎಲ್.ಚಂದ್ರಶೇಖರ ನಾಯಕ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಜಗದೀಶ ಗಂಗಣ್ಣವರ, ಪೌರಾಯುಕ್ತ ಗುರುಸಿದ್ದಯ್ಯ ಸೇರಿದಂತೆ ವಿವಿಧ ವಾರ್ಡ್ ಗಳ ನಗರಸಭೆ ಸದಸ್ಯರು, ನಗರಸಭೆ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಫೆ.06 ಕ್ಕೆ ವಾರ್ಷಿಕೋತ್ಸವ, ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ

■ **ಹಂಪಿ ಟೈಮ್ಸ್ ಬಳ್ಳಾರಿ**

ಪದವಿ ಪೂರ್ವ ಶಿಕ್ಷಣ ಇಲಾಖೆ ವತಿಯಿಂದ ಸರ್ಕಾರಿ (ಮಾ.ಪು) ಪದವಿ ಪೂರ್ವ ಕಾಲೇಜಿನ 2023–24ನೇ ಸಾಲಿನ ಕಾಲೇಜು ವಾರ್ಷಿಕೋತ್ಸವ ಹಾಗೂ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ದಿನಾಚರಣೆ ಕಾರ್ಯಕ್ರಮವನ್ನು ಫೆ.06 ರಂದು ಬೆಳಿಗ್ಗೆ 09.30 ಕ್ಕೆ ನಗರದ ಡಾ.ರಾಜ್‌ಕುಮಾರ್ ರಸ್ತೆಯ ರಾಘವ ಕಲಾಮಂದಿರದಲ್ಲಿ ಏರ್ಪಡಿಸಲಾಗಿದೆ.

ಯುವಸಬಲೀಕರಣ, ಕ್ರೀಡೆ, ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ನಾಗೇಂದ್ರ ಅವರು ಕಾರ್ಯಕ್ರಮ ಉದ್ಘಾಟನೆ ನೆರವೇರಿಸುವರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು.

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಕೋತಿಗುಡ್ಡದ ರಾಜ್ಯಮಟ್ಟದ ವ್ಯಕ್ತಿತ್ವ ವಿಕಸನ ತರಬೇತುದಾರರಾದ ರಮೇಶ್ ಬಲ್ಲೀಸ್ ಅವರು ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡುವರು.

ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಟಿ.ಪಾಲಾಕ್ಷ, ಸರ್ಕಾರಿ (ಮಾ.ಪು) ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಪಿ.ನಾಗೇಶ್ವರ ರಾವ್, ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರಾದ ರಮೇಶ್ ಬುಜ್ಜಿ, ಸದಸ್ಯರಾದ ಸಿ.ಸಿದ್ದಣ್ಣ, ರಮೇಶ್ ಗೊಲ್ಲ, ಅರ್ಷದ್ ಅಲಿ ಹಾಗೂ ಮಹಿಳಾ ಸದಸ್ಯರಾದ ಬಿ.ಶ್ರುತಿ ಸೇರಿದಂತೆ ಕಾಲೇಜಿನ ಉಪನ್ಯಾಸಕರು, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

# ಅಂಚೆ ಇಲಾಖೆಯಿಂದ ಸರ್ಕಾರದ ಯೋಜನೆಗಳ ಮೇಳಕ್ಕೆ ಚಾಲನೆ

■ **ಹಂಪಿ ಟೈಮ್ಸ್ ರಾಯಚೂರು**

ಫೆ.5ರಂದು ನಗರದ ನವೋದಯ ಎಜುಕೇಶನಲ್ ಟ್ರಸ್ಟ್ ಕ್ಯಾಂಪಸ್‌ನಲ್ಲಿ ರಾಯಚೂರು ಅಂಚೆ ವಿಭಾಗದ ವತಿಯಿಂದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗಾಗಿ ಕೇಂದ್ರ ಸರ್ಕಾರದ ಅಂಚೆ ಜೀವ ವಿಮೆ, ಸುಕನ್ಯಾ ಸಮೃದ್ಧಿ ಖಾತೆ, ಮಹಿಳಾ ಸಮ್ಮಾನ ಉಳಿತಾಯ ಖಾತೆ ಹಾಗೂ ಭವಿಷ್ಯ ನಿಧಿ ಸೇರಿದಂತೆ ಇನ್ನಿತರ ಯೋಜನೆಗಳ ಕುರಿತು ಮೂರು ದಿನಗಳ ಮೇಳವನ್ನು ನವೋದಯ ವೈದ್ಯಕೀಯ ಮಹಾವಿದ್ಯಾಲಯದ ನಿರ್ದೇಶಕ ಡಾ.ಬಿ ದೇವಾನಂದ ಅವರು ಉದ್ಘಾಟಿಸಿದರು.

ಮೇಳವು ಫೆ.5ರಿಂದ ಫೆ.7ರವರೆಗೆ ಇರಲಿದ್ದು, ಉದ್ಘಾಟನಾ ಕಾರ್ಯಕ್ರಮದಲ್ಲಿ ಅಂಚೆ ಅಧೀಕ್ಷಕಿ ಎಂ.ಲಕ್ಷ್ಮಿ ಮಾಧವಿ, ಸಹಾಯಕ ಅಂಚೆ ಅಧೀಕ್ಷಕ ಆನಂದ ವಂದಾಲ್ ಸೇರಿದಂತೆ ಅಂಚೆ ಇಲಾಖೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಹಂಪಿ ಟೈಮ್ಸ್
HAMPI TIMES

**ಕವಿ ಮನಸು**

## ಧ್ವನಿ ಬೆಳಕಲಿ ತಿಳಿಯೋಣ ಬಾ ಇತಿಹಾಸ

ವಿಶ್ವ ವಿಖ್ಯಾತ ಐತಿಹಾಸಿಕ
ಕುರುಹುಗಳ ನೆಲೆವಿಡಿ'ನಲಿ...!
ಭೂರಮೆಯೇ ನಾಚುವಂತೆ
ಕೃಷ್ಣದೇವರಾಯನ
ಆಳ್ವಿಕೆಯ ಕುರುಹು
ಕಲ್ಲು ಬಂಡೆಯ ನಡುವೆ
ಪ್ರತಿ ಶಿಲ್ಪಕಲೆಯು
ಸ್ವರವಾಗಿ ಹೇಳುತಿದೆ
ವಿಜಯನಗರ ಸಾಮ್ರಾಜ್ಯದ ಇತಿಹಾಸ...!

ತುಂಗಾರತಿಯ ತೇರಿನಲಿ
ವಿರೂಪಾಕ್ಷ ಸನ್ನಿಧಿಯಲಿ
ಮುತ್ತು ರತ್ನಗಳಾಗಿ
ಹೊಳೆಯುವ
ವಿಜಯನಗರ ಸಾಕ್ಷಿ ಪ್ರಜ್ಞೆಯಾಗಿರುವ...
ಕಲ್ಲಿನ ರಥ ಏಳುತಿದೆ
ವಿಜಯನಗರ
ಸಾಮ್ರಾಜ್ಯದ ಇತಿಹಾಸ...!

ಈ ನೆಲದ ಹಂಪಿ ಮಣ್ಣಲಿ
ಸಾವಿರ ದೀಪಗಳ ಸಾಗರದಂತೆ
ಬಣ್ಣ ಬಣ್ಣದ ಚಿತ್ತಾರದಿ
ಭವ್ಯ ಪರಂಪರೆಯ
ಕಲಾದೀಪವಾಗಿ
ಭಾನೆತ್ತರಕೆ ಜಗಮಗಿಸಿತಿರುವ

ವಿಸ್ಮಯದ ಕಳಶದಂತಿರುವ –
ವಿರೂಪಾಕ್ಷ ದೇವಾಲಯ...!
ಜ್ಞಾನದ– ಕಡಲೇಕಾಯಿ ಗಣಪತಿ
ದೇವಾಲಯ?!
ಸ್ಫೂರ್ತಿಯ– ಉದ್ದನ ವೀರಭದ್ರ
ದೇವಾಲಯ?!
ಶೌರ್ಯದ– ಉಗ್ರ ನರಸಿಂಹ ದೇವಾ
ಲಯ?!
ಭಕ್ತಿಯ –ವಿಠಲ ದೇವಾಲಯ?!
ಭಾಂದವ್ಯದ– ಅಕ್ಕ ತಂಗಿಯರ ಗುಡ್ಡ?!!
ಸಿಂಹ ಸ್ವಪ್ನದ– ಕೋದಂಡರಾಮ?!
ಸಾಹಿತ್ಯ ಅನುಭವದ –
ಪುರಂದರದಾಸರ ಮಂಟಪ?!
ಹಿರಿಯರ ಪುಜಿಸೋ– ಪವಿತ್ರ ಮಹಾ
ನವಮಿ ದಿಬ್ಬ...!
ಮಿನುಗುವ ನಕ್ಷತ್ರದಂತಿರುವ– ಕಮಲ
ಮಹಲ್?!
ರೈತರ ಜೀವನಾಡಿಯಾಗಿರುವ– ತುಂಗಾ
ಭದ್ರ...!
ಗುರು ಪರಂಪರೆಯ– ಕೋಟಿ ಲಿಂಗ?
ಬಡವಿಲಿಂಗ...!
ಬಾನೆತ್ತರದ– ಕಾವಲು ಗೋಪುರ?!
ಗತ ವೈಭವ–ನೆಲಮಾಳಿಗೆಯ
ಅರಮನೆಯ ಆನೆಗಳ ಸಾಲು...!
ಕನ್ನಡಿಯಂತಿರುವ– ಎದುರು ಬಸವಣ್ಣನ
ಸ್ಮಾರಕ...!
ವೀರರಾಳಿದ ಬಿಡು...
ಶಿಲ್ಪಕಲೆಯ ತವರೂರಲಿ
ಕಲ್ಲು ಬಂಡೆಗಳ ನಡುವೆ
ಧ್ವನಿ ಬೆಳಕಲಿ...
ತಿಳಿಯೋಣ...ಬಾ...!
ಕೃಷ್ಣದೇವರಾಯನ ಇತಿಹಾಸ...!

– **ಪ್ರಸನ್ನ ಕುಮಾರ್**, ಬಿ.ಅರ್.
DPM ಜಿ.ಪಂ.ವಿಜಯನಗರ

# ಕಾರ್ತಿಕ್ ಕುಟುಂಬಕ್ಕೆ ಚೆಕ್ ವಿತರಣೆ

**ಜೆ.ಕಾರ್ತಿಕ್‌ರ ಪುತ್ರಿಯ ಹೆಸರಲ್ಲಿ 10 ಲಕ್ಷ ರೂ ಠೇವಣಿ | ಕುಟುಂಬಕ್ಕೆ ಸರ್ಕಾರದಿಂದ 5 ಲಕ್ಷ ರೂ ಪರಿಹಾರ**





■ **ಹಂಪಿ ಟೈಮ್ಸ್ ಹೊಸಪೇಟೆ**

ಇತ್ತೀಚೆಗೆ ರಸ್ತೆ ಅಪಘಾತದಲ್ಲಿ ಮೃತಪಟ್ಟ ರೈತ ನಾಯಕ ಜೆ.ಕಾರ್ತಿಕ್ ಅವರ ನಿವಾಸಕ್ಕೆ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ. ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಶಾಸಕ ಹೆಚ್.ಆರ್.ಗವಿಯಪ್ಪ ಅವರೊಂದಿಗೆ ನಗರದ ಎಂ.ಪಿ.ಪ್ರಕಾಶ್ ನಗರದಲ್ಲಿರುವ ಜೆ.ಕಾರ್ತಿಕ್ ಅವರ ಮನೆಗೆ ತೆರಳಿ ಮೃತ ಕಾರ್ತಿಕ ಅವರ ತಾಯಿ ಬಸಮ್ಮ, ಪತ್ನಿ ಮಂಗಳಾ ಹಾಗೂ ಮಗಳು ಬೃಂದಾ ಅವರಿಗೆ ಸಾಂತ್ವನ ಹೇಳಿ ವೈಯಕ್ತಿಕವಾಗಿ ಸಚಿವ ಮತ್ತು ಶಾಸಕರಿಂದ ತಲಾ 5 ಲಕ್ಷ ರೂ. ಆರ್ಥಿಕ ನೆರವನ್ನು ಬಾಲಕಿಯ ವಿದ್ಯಾಭ್ಯಾಸ ಹಾಗೂ ಭವಿಷ್ಯಕ್ಕಾಗಿ ಠೇವಣಿ ಇಡುವುದಾಗಿ ಭರವಸೆ ನೀಡಿದರು.

ಕಾರ್ತಿಕ ಅವರ ಮಗಳ ವಿದ್ಯಾಭ್ಯಾಸಕ್ಕೆ ತಾವು ಹಾಗೂ ಶಾಸಕರಾದ ಗವಿಯಪ್ಪ ಅವರು ಸೇರಿ ಸಹಾಯ ಮಾಡುವುದಾಗಿ ಇದೆ ವೇಳೆ ಸಚಿವರು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು, ತಹಶೀಲ್ದಾರ ವಿಶ್ವಜಿತ್ ಮೆಹತಾ ಸೇರಿದಂತೆ ಮತ್ತಿತರರು ಇದ್ದರು.




# ತಾಯಿಕಾರ್ಡ್ ಮಹತ್ವ ಜಾಗೃತಿ

**ಡಿಹೆಚ್‌ಒ ಡಾ.ರಮೇಶ್ ಬಾಬು ಹೇಳಿಕೆ | ಆಯುಷ್ಮಾನ್ ಭವಃ ಮೇಳಗಳಲ್ಲಿ ಮಾಹಿತಿ**

■ **ಹಂಪಿ ಟೈಮ್ಸ್ ಬಳ್ಳಾರಿ**

ಪ್ರತಿ ಮಂಗಳವಾರ ಜಿಲ್ಲೆಯ ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ನಡೆಯುವ ಆಯುಷ್ಮಾನ್ ಭವಃ ಮೇಳಗಳಲ್ಲಿ ತಾಯಿಕಾರ್ಡ್‌ಗಳ ಬಗ್ಗೆ ಮಹತ್ವ ತಿಳಿಸಿಕೊಡಲಾಗುತ್ತಿದ್ದು, ಗರ್ಭಿಣಿ ಮಹಿಳೆಯರು ಇದರ ಬಗ್ಗೆ ಅರಿವು ಹೊಂದಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರಮೇಶ್ ಬಾಬು ಅವರು ತಿಳಿಸಿದ್ದಾರೆ.

ಗರ್ಭಿಣಿ ಎಂದು ತಿಳಿದ ಕೂಡಲೇ, 12 ವಾರದೊಳಗೆ ನೋಂದಣಿ ಮಾಡಿಸಿಕೊಳ್ಳಬೇಕು. ಸಂಬಂಧಿತ ಗರ್ಭಿಣಿಗೆ ತಾಯಿಕಾರ್ಡ್ ಒದಗಿಸುವ ಜೊತೆಗೆ ಕಾರ್ಡ್‌ನಲ್ಲಿ ನಮೂದಾಗಿರುವ ಮಾಹಿತಿಯನ್ನು ಎಲ್ಲರಿಗೂ ತಿಳಿಸುವ ಕಾರ್ಯವನ್ನು ಆಯುಷ್ಮಾನ್ ಭವಃ ಮೇಳದಲ್ಲಿ ಮಾಡಲಾಗುತ್ತಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಯುಷ್ಮಾನ್ ಭವಃ ಮೇಳಗಳಲ್ಲಿ ಸಮುದಾಯ ಆರೋಗ್ಯಾಧಿಕಾರಿಗಳು, ವೈದ್ಯರು, ತಜ್ಞ ವೈದ್ಯರ ಮೂಲಕಆರೋಗ್ಯತಪಾಸಣೆಕೈಗೊಳ್ಳಲಾಗುತ್ತಿದ್ದು, ಗರ್ಭಿಣಿಯೆಂದು ತಿಳಿದ ಕೂಡಲೇ ಗರ್ಭಿಣಿಯರಿಗೆ ಸಕಾಲದಲ್ಲಿ ತಾಯಿ ಕಾರ್ಡ್ ಒದಗಿಸಲಾಗುತ್ತಿದೆ. ಅವರ ಆಧಾರ್‌ಕಾರ್ಡ್ ಮತ್ತು ಬ್ಯಾಂಕ್ ಮಾಹಿತಿಯನ್ನು ಕ್ರೋಢೀಕರಿಸಿ ಹೆರಿಗೆ ಪೂರ್ವದಲ್ಲಿ ಸಿಗುವ ಎಲ್ಲಾ ಚುಚ್ಚುಮದ್ದುಗಳನ್ನು ಸಕಾಲದಲ್ಲಿ ನೀಡಲು ಸಹಕಾರಿಯಾಗುತ್ತದೆ ಎಂದು ತಿಳಿಸಿದ್ದಾರೆ.

ಗರ್ಭಿಣಿ ಸಮಯದಲ್ಲಿ ಕನಿಷ್ಠ 180 ಕಬ್ಬಿಣಾಂಶ ಮಾತ್ರೆಗಳನ್ನು ಕೊಡಿಸುವ ಮೂಲಕ ರಕ್ತಹೀನತೆಯನ್ನು ನಿಯಂತ್ರಿಸಿ ಸಹಜ ಹೆರಿಗೆಗೆ ಅಗತ್ಯ ಇರುವ ಸಿದ್ಧತೆಯನ್ನು ಕೈಗೊಳ್ಳಲಾಗುತ್ತಿದೆ. ಅಲ್ಲದೆ ಜನನದ ನಂತರ ಮಗುವಿಗೆ 12 ಮಾರಕ



ರೋಗಗಳ ವಿರುದ್ಧ ನೀಡುವ ಲಸಿಕೆಗಳನ್ನು ವಯಸ್ಸಿಗನುಸಾರ ಸಂಪೂರ್ಣವಾಗಿ ಪಡೆಯುವ ಕುರಿತು ಮಾಹಿತಿ ನೀಡಲಾಗುತ್ತಿದೆ ಎಂದು ಹೇಳಿದ್ದಾರೆ.

**ಜೀವನ ಶೈಲಿ ಕಾಯಿಲೆಗಳ ನಿರ್ವಹಣೆ:**

ಜೀವನ ಶೈಲಿಯ ರೋಗಗಳಾದ ರಕ್ತದೊತ್ತಡ, ಸಕ್ಕರೆ ಕಾಯಿಲೆಯನ್ನು ಪರೀಕ್ಷೆ ಕೈಗೊಳ್ಳಲಾಗುತ್ತದೆ. ಎರಡು ವಾರಕ್ಕಿಂತ ಹೆಚ್ಚು ದಿನಗಳ ಕೆಮ್ಮು ಇದ್ದಲ್ಲಿ ಕ್ಷಯರೋಗ ಪರೀಕ್ಷೆ ಹಾಗೂ ರೋಗ ಲಕ್ಷಣಗಳು ಉಳ್ಳುವರ ಕಫ ಪರೀಕ್ಷೆಯನ್ನು ಕೈಗೊಳ್ಳಲಾಗುತ್ತದೆ.

**ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಕಾರ್ಡ್ ಸೃಜನೆ:**

ಬಿಪಿಎಲ್ ಕುಟುಂಬಗಳಿಗೆ 05 ಲಕ್ಷದವರೆಗೆ ಉಚಿತ ಚಿಕಿತ್ಸಾವೆಚ್ಚ ಭರಿಸಲು ಅನುಕೂಲವಾಗುವ ಆಯುಷ್ಮಾನ್ ಭವ– ಪ್ರಧಾನ ಮಂತ್ರಿ ಜನಾರೋಗ್ಯ ಯೋಜನೆ– ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆ ಕಾರ್ಡುಗಳನ್ನು ಡಿಜಿಟಲ್ ಹೆಲ್ತ್ ಅಕೌಂಟ್ ಸಂಖ್ಯೆಯೊಂದಿಗೆ ಕಾರ್ಡ್‌ಗಳನ್ನು ಮೊಬೈಲ್‌ಗಳ ಮೂಲಕ ಸೃಜಿಸಲಾಗುವುದು.

**ಅಂಗಾಂಗ ದಾನ ನೋಂದಣಿ:**

ಜಿಲ್ಲೆಯಲ್ಲಿ ಈಗಾಗಲೇ 4010 ಅಂಗಾಂಗ ದಾನ ನೋಂದಣಿಯನ್ನು ಮಾಡಿ ರಾಷ್ಟ್ರ ಮಟ್ಟದಲ್ಲಿ ಮುಂಚುಣಿಯಲ್ಲಿದ್ದು, ನೋಂದಣಿಯನ್ನು ಸಹ ಮಾಡಲಾಗುವುದು. ಶಿಬಿರದಲ್ಲಿ ಡೆಂಗ್ಯು ಮತ್ತು ಚಿಕುನ್‌ಗುನ್ಯ ಕುಟುಂಬ ಕಲ್ಯಾಣ ವಿಧಾನಗಳು, ತಾಯಿ ಮಗುವಿನ ಆರೈಕೆ, ಮಾನಸಿಕ ಆರೋಗ್ಯ ಸಲಹೆಗಾಗಿ ಟೆಲಿ ಮನಸ್ ಮಾನಸಿಕ ಆರೋಗ್ಯ ಸಹಾಯವಾಣಿ14416 ಕುರಿತು ಸಹ ಮಾಹಿತಿ ನೀಡಲಾಗುತ್ತಿದೆ ಮತ್ತು ಇತರ ಸಾಮಾನ್ಯ ಆರೋಗ್ಯ ಸೇವೆಗಳನ್ನು ಸಹ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಹೆಚ್ಚಿನ ಅಗತ್ಯ ಚಿಕಿತ್ಸೆ ಇರುವಂತಹ ರೋಗಿಗಳಿಗೆ ಜಿಲ್ಲಾ ಆಸ್ಪತ್ರೆ ಮತ್ತು ವಿಮ್ಸ್‌ಗೆ ಕಳಿಸಿಕೊಡಲಾಗುವುದು. ಸಾರ್ವಜನಿಕರು ತಮ್ಮ ಆಧಾರ್ ಕಾರ್ಡ್, ಮೊಬೈಲ್ ಹಾಗೂ ಈ ಹಿಂದೆ ಅಸ್ಪತ್ರೆಗೆ ಭೇಟಿ ನೀಡಿ ತೋರಿಸಿದ ಚೀಟಿಗಳನ್ನು ತಂದು ಶಿಬಿರದಲ್ಲಿ ಪಾಲ್ಗೊಂಡು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರಮೇಶ್ ಬಾಬು ಅವರು ತಿಳಿಸಿದ್ದಾರೆ.

# ಜಿಲ್ಲೆಯ ಅಭಿವೃದ್ಧಿಗೆ ಉದ್ಯೋಗ ಖಾತರಿ ಯೋಜನೆ ನೆರವಾಗಿದೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯ ಅಭಿವೃದ್ಧಿಗೆ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನೆರವಾಗಿದ್ದು, ಜಲಸಂರಕ್ಷಣೆ, ಮೂಲಸೌಕರ್ಯ ಸ್ವತ್ತುಗಳ ನಿರ್ಮಾಣ ಸೇರಿದಂತೆ ಅಭಿವೃದ್ಧಿಗೆ ಆದ್ಯತೆಯನ್ನು ನೀಡಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಹೇಳಿದರು.

ಜಿಲ್ಲಾ ಪಂಚಾಯತ್ ವತಿಯಿಂದ ಶ್ರೀಧರಗಡ್ಡ ಗ್ರಾಮ ಪಂಚಾಯತಿ ಆವರಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ನರೇಗಾ ದಿನಾಚರಣೆಯ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಉದ್ಯೋಗ ಖಾತರಿ ಯೋಜನೆಯಡಿ ಸಮುದಾಯ ಆಧಾರಿತ ಕಾಮಗಾರಿಗಳಾದ ಶಾಲೆ ಅಭಿವೃದ್ಧಿ, ಸ್ಮಶಾನ ಅಭಿವೃದ್ಧಿ, ಅಂಗನವಾಡಿ, ರಸ್ತೆ ಕಾಮಗಾರಿಗಳು ಮತ್ತು ಸಂಜೀವಿನಿ ಶೆಡ್ ಕಾಮಗಾರಿಗಳಿವೆ. ಅವುಗಳನ್ನು ಅನುಷ್ಠಾನಗೊಳಿಸುವುದರ ಮೂಲಕ ಎಲ್ಲಾ ಚುನಾಯಿತಿ ಪ್ರತಿಧಿಗಳು ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮ ವಹಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಗಣ್ಯರೆಲ್ಲರೂ ಹೊಸ ಪಂಚಾಯತಿ ಕಟ್ಟಡದ ಆವರಣದಲ್ಲಿ ಸಸಿ ನೆಟ್ಟರು. ಕೂಲಿ ಕಾರ್ಮಿಕರುಗಳಿಗೆ ಉಚಿತ ಆರೋಗ್ಯ ತಪಾಸಣೆ ಮಾಡಲಾಯಿತು. ಕೂಲಿಕಾರರ ಮಕ್ಕಳಿಗೆ ಪ್ರಬಂಧ ಮತ್ತು ಚಿತ್ರಕಲೆಯಲ್ಲಿ ಸ್ಪರ್ದೆಯನ್ನು ಏರ್ಪಡಿಸಿ, ವಿಜೇತರಿಗೆ ಪ್ರಶಸ್ತಿ ಪ್ರಮಾಣ ಪತ್ರ ವಿತರಣೆ ಮಾಡಿದರು.

100 ದಿನ ಪೂರೈಸಿದ ಕುಟುಂಬಗಳಿಗೆ ಅಂಗಿ ಮತ್ತು ಕ್ಯಾಪ್‌ಗಳನ್ನು ನೀಡಿದರು. ವಿಶೇಷ ಚೇತನರಿಗೆ ಕ್ರೀಡೆಯನ್ನು ಏರ್ಪಡಿಸಿ ಸನ್ಮಾನಿಸಿದರು. ಮಹಾತ್ಮ ಗಾಂಧಿ ನರೇಗಾ ಯೋಜನೆಯ ಕೂಲಿಕಾರ್ಮಿಕರು ವಿವಿದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾದರು.

ಈ ಸಂದರ್ಭದಲ್ಲಿ ಜಿಪಂ ಉಪಕಾರ್ಯದರ್ಶಿ ಗಿರಿಜಾ ಶಂಕರ್, ಜಿಲ್ಲಾ ಐಇಸಿ ಸಂಯೋಜಕರು, ಪಿಡಿಓ, ತಾಲೂಕು ನರೇಗಾ ಸಿಬ್ಬಂದಿಗಳು, ಎಲ್ಲಾ ತಾಂತ್ರಿಕ ಸಹಾಯಕರು, ಬಿಫ್ಟಿಗಳು, ಗ್ರಾಮ ಕಾಯಕ ಮಿತ್ರರು ಮೇಟಿಗಳು, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು, ಆರೋಗ್ಯ ಇಲಾಖೆಯವರು, ಎನ್ ಆರ್ ಎಲ್ ಎಮ್ ಅಧಿಕಾರಿಗಳು, ಕೂಲಿಕಾರ್ಮಿಕರು, ಪಂಚಾಯತಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಮಕ್ಕಳಿಗೆ ಸಂಸ್ಕಾರ ಸಾಮಾನ್ಯ ಜ್ಞಾನ ಅಗತ್ಯ

**ಪರಮಪೂಜ್ಯ ಶ್ರೀ ಶ್ರೀ ಶ್ರೀ ನಿರ್ಭಯಾನಂದ ಸರಸ್ವತಿ ಸ್ವಾಮೀಜಿ ಆಶೀರ್ವಚನ | ಮಹಿಳಾ ಪೊಲೀಸ್ ಸಿಬ್ಬಂದಿ, ಹೋಂಗಾರ್ಡ್‌ಗಳಿಗೆ ಸನ್ಮಾನ**

■ **ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಹಂಸಾಂಬ ಶಾರದಾಶ್ರಮದ ಅಧ್ಯಕ್ಷರಾದ ಮಾತಾಜಿ ಪ್ರಬೋಧಮಯಿ, ಅವರ ಆಶ್ರಯದಲ್ಲಿ ಇತ್ತೀಚೆಗೆ ನಡೆದ, ಶ್ರೀ ಸ್ವಾಮಿ ವಿವೇಕಾನಂದರ 161ನೇ ಜಯಂತ್ಯೋತ್ಸವ ಹಾಗೂ "ವಿದ್ಯಾರ್ಥಿಗಾಗಿ " ಲಿಖಿತ ಪರೀಕ್ಷೆಯ ವಿಜೇತರಿಗೆ ಸನ್ಮಾನಿಸಲಾಯಿತು.

ಪರಮಪೂಜ್ಯ ಶ್ರೀ ಶ್ರೀ ಶ್ರೀ ನಿರ್ಭಯಾನಂದ ಸರಸ್ವತಿ ಸ್ವಾಮೀಜಿ ಆಶೀರ್ವಚನ ನೀಡಿದರು. ವಿವೇಕಾನಂದರ ಆದರ್ಶಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಂಡರೆ ಸಾಮಾನ್ಯ ವ್ಯಕ್ತಿತ್ವ ಅಸಾಮಾನ್ಯ ವ್ಯಕ್ತಿತ್ವ ಆಗಲು ಸಾಧ್ಯ. ಪ್ರಸ್ತುತ ಮಕ್ಕಳಲ್ಲಿ ಸಂಸ್ಕಾರದ ಕೊರತೆ ಇದ್ದು, ಈ ಹಿನ್ನೆಲೆಯಲ್ಲಿ ಸ್ವಾಮೀಜಿಯವರು 3 ರಿಂದ 8 ವರ್ಷದವರೆಗೆ ಮಕ್ಕಳನ್ನು ಶಾಲೆಗೆ ಕಳುಹಿಸುವ ಬದಲು ಮನೆಯಲ್ಲಿಯೇ ಅವರಿಗೆ ಸಾಮಾನ್ಯ ಜ್ಞಾನವನ್ನು ತಿಳಿಸಬೇಕು. ಪ್ರಸ್ತುತ ತಂತ್ರಜ್ಞಾನವು ನಮ್ಮ ವೇದಗಳ ಕಾಲದಲ್ಲಿಯೇ ಇತ್ತು ಎಂದು ಕೆಲವು ಉದಾಹರಣೆ ಮೂಲಕ ತಿಳಿಸಿದರು.

ನಮ್ಮ ದೇಶದಲ್ಲಿ ವಿದ್ಯಾರ್ಥಿಗಳು ದಡ್ಡರಿಲ್ಲ, ಕೆಟ್ಟವರಿಲ್ಲ.ಏಕೆಂದರೆ ಕೂಲಿ ಹುಡುಗ ಕಂಡಕ್ಟರ್ ಆಗಲು ಹೊರಟವನು, ಸ್ವಾಮಿ ವಿವೇಕಾನಂದರ ಪುಸ್ತಕ ಓದಿ ಮೊದಲ ಪ್ರಯತ್ನದಲ್ಲಿಯೇ ಐ.ಪಿ.ಎಸ್. ಪರೀಕ್ಷೆ



ಪಾಸಾದ, ಆತ್ಮವಿಶ್ವಾಸ ದಿಂದ ವಿದ್ಯಾರ್ಥಿಗಳು ಇಂತಹ ಗುರಿಗಳನ್ನು ಇಟ್ಟುಕೊಳ್ಳಬೇಕು ಆಗ ಮಾತ್ರ ಗುರಿ ತಲುಪಲು ಸಾಧ್ಯ. ತ್ಯಾಗ ವಿಲ್ಲದೆ ಯಾವುದೇ ಮಹತ್ಕಾರ್ಯಗಳು ನಡೆಯುವುದಿಲ್ಲ ಎನ್ನುವ ವಿವೇಕಾನಂದರ ವಾಣಿಯಂತೆ, ಮಾತಾಜಿ ಯವರು ಸಾಮಾನ್ಯವಾದ ಆಕರ್ಷಣೆಗೆ ಒಳಗಾಗದೇ, ತ್ಯಾಗ ಮಾಡಿ ಇಡೀ ವಿಜಯನಗರ ಜಿಲ್ಲೆಯಾದ್ಯಂತ ಒಟ್ಟು 78 ಶಾಲೆ ವಿದ್ಯಾರ್ಥಿಗಳು "ವಿದ್ಯಾರ್ಥಿ ಗಾಗಿ " ಪುಸ್ತಕದಡಿಯಲ್ಲಿ 4300 ವಿದ್ಯಾರ್ಥಿಗಳು ಪರೀಕ್ಷೆ ಬರೆದು ತೇರ್ಗಡೆಯಾಗಿ ದ್ದಾರೆ. ಇಂತಹ ಸಾಧನೆ ಯಿಂದ ಕೆಲವೊಂದು ಮಕ್ಕಳ ಳಿಗೆ ಅರ್ಥವಾದರೆ ಅನೇಕ ಸಾಧಕರು ನಮ್ಮ ವಿಜಯನಗರದಲ್ಲಿ ಉದ್ಭವವಾಗುತ್ತಾರೆ. ಇದು ಸ್ವಾಮಿ ವಿವೇಕಾನಂದರ ಕನಸಾಗಿತ್ತು ಎಂದು ಹೇಳಿದರು.

ವಿದ್ಯಾರ್ಥಿಗಳಿಗೆ ಶಿಸ್ತು, ಸಮಯ ಪ್ರಜ್ಞೆಯ ಅರಿವಿರಬೇಕು.ಒಬ್ಬ ವಿವೇಕಾನಂದ, ಕಲಾಂ, ಸುಭಾಷ ಚಂದ್ರ, ನಾರಾಯಣ ಮೂರ್ತಿ ಯವರಂತೆ ಆಗಲು ಪ್ರಯತ್ನ ಪಟ್ಟರೆ ಎಲ್ಲರೂ ಆಗಲು ಸಾಧ್ಯವಿದೆ. ಆದರೆ ಇದಕ್ಕೆ ಪರಿಶ್ರಮ, ತ್ಯಾಗ, ತಾಳ್ಮೆ, ಸಹನೆ ತಂಬಾ ಮುಖ್ಯ. ಮಾತಾಜಿ ಯವರು ಕೂಡ ಸಾಮಾನ್ಯ ಕೆಲಸ ಮಾಡಿಲ್ಲ, ಪರೀಕ್ಷೆ ಬರೆಸಿ ದಾಖಲೆ ಮಾಡಿದ್ದಾರೆ. ಇಂತಹಕಾರ್ಯಕ್ರಮಗಳುನಿರಂತರವಾಗಿರಲಿ. ವಿದ್ಯಾರ್ಥಿಗಳು ಪ್ರಯೋಜನಪಡೆಯಬೇಕು ಎಂದರು.

ಮಾತಾಜಿ ಶಿವಮಯಿ ದಿವ್ಯ ಉಪಸ್ಥಿತಿ ಹಾಗೂ ಸಂಕೀರ್ತನೆ ನೆರವೇರಿಸಿದರು. ವಿಜಯನಗರದ ಜಿಲ್ಲಾಧಿಕಾರಿ ಎಂ. ಎಸ್. ದಿವಾಕರ ಮಾತನಾಡಿ, ನಾವೆಲ್ಲರೂ ಉತ್ತಮ ಆದರ್ಶಗಳನ್ನು ಮೈಗೂಡಿಸಿ ಕೊಂಡು, ಮತ್ತೊಬ್ಬರ ಭಾವನೆಗಳಿಗೆ ಬೆಲೆ ಕೊಟ್ಟು, ಹೊಂದಿಕೊಂಡು ಉತ್ತಮ ಸಂಸ್ಕಾರ ಸಂಸ್ಕೃತಿ ಯ ಹಿನ್ನೆಲೆಯಲ್ಲಿ ತಮ್ಮ ಅನುಭವದ ಮಾತುಗಳಿಂದ ಪ್ರೇರಣೆ ನೀಡಿದರು.

ಶಾಸಕ ಹೆಚ್. ಆರ್. ಗವಿಯಪ್ಪ ಮಾತನಾಡಿ, ಮಕ್ಕಳ ಉತ್ತಮ ಶೈಕ್ಷಣಿಕ ಬದಲಾವಣೆಯ ಬಗ್ಗೆ ಹೆಚ್ಚಿನ ಆದ್ಯತೆ ಯ ಕಡೆಗೆ ಗಮನ ಹರಿಸುವೆ ಎಂದರು.

ವೇದಿಕೆಯಲ್ಲಿ, ರವಿ ಗುಮಾಸ್ತೆ, ಸುಧೀರಸಿಂಹ ಘೋರ್ಪಡೆ, ಕರಿ ಬಸವರಾಜ ಬಾದಾಮಿ ಉಪಸ್ಥಿತರಿದ್ದರು.

ಸಂಜೆ ಕಾರ್ಯ ಕ್ರಮ ದಲ್ಲಿ, ಸಾಮೂಹಿಕ ಲಲಿತಾ ಸಹಸ್ರನಾಮ ಪಠಣ ದೊಂದಿಗೆ ಶ್ರೀಮಾತೆ ಶಾರದಾ ದೇವಿಯವರ 171ನೇ ಜಯಂತ್ಯೋತ್ಸವ ಅಂಗವಾಗಿ " ಜೀವಂತ ದುರ್ಗಾ " ಪೂಜೆ ಹಾಗೂ ಶ್ರೀಮಾತೆಯವರ ಜೀವನ– ಭರವಸೆಯ ಸೋಪಾನ ವಿಷಯದಡಿಯಲ್ಲಿ ಭಕ್ತ ಸಂಕುಲಕ್ಕೆ ಸ್ವಾಮೀಜಿ ಯವರು ಆಶೀರ್ವಚನ ನೀಡಿದರು. ಶ್ರದ್ಧೆ ಎಂದರೆ ಎಲ್ರೂ ಹೇಳಿದ್ದನ್ನೆಲ್ಲಾ ನಂಬುವು ದಂತಲ್ಲ. ಪರೀಕ್ಷೆ ಮಾಡಿದ ನಂತರ ನಂಬುವುದು. ಶಾರದಾ ಮಾತೆ ಯಾರಲ್ಲಿಯೂ ಭೇದವನ್ನು ಕಾಣದವಳು, ಎಲ್ಲರನ್ನು ಮಕ್ಕಳಂತೆ, ಪತಿಯಾದ ರಾಮಕೃಷ್ಣರನ್ನು ಸಹ ಮಗುವಿನಂತೆ ಪಾಲನೆ ಮಾಡಿದವಳು. ಶಾರದಾ ಮಾತೆಯ ಜೀವನದಲ್ಲಿ ನಡೆದ ಬದಲಾವಣೆಗಳನ್ನು ತಿಳಿಯಲು ಪುಸ್ತಕ ಗಳನ್ನು ಓದಿ ನಾವು ಪ್ರಸ್ತುತ ಹೇಗೆ ಜೀವನ ನಡೆಸಬೇಕು ಅನ್ನುವುದನ್ನು ತಿಳಿಯ ಬೇಕಾಗಿದೆ. ತಾಯಿಯಲ್ಲಿ ನಾವು ಪರಮಾತ್ಮನನ್ನು ಕಾಣ್ತೇವಿ. ಅದರ ಸಂಕೇತವಾಗಿಯೇ ನಾವು ಮಾತೆಯ ಜಯಂತಿಯ ಅಂಗವಾಗಿ ಈ ಕಾರ್ಯಕ್ರಮ. ಈಬಾರಿ ಮಹಿಳಾ ಪೋಲೀಸ್ ಸಿಬ್ಬಂದಿ ಹಾಗೂ ಹೋಮ್‌ಗಾರ್ಡ್‌ನಲ್ಲಿ ಸೇವೆ ಸಲ್ಲಿಸಿತ್ತಿರುವ ಮಹಿಳೆಯರನ್ನು ಗುರುತಿಸಿ ಸನ್ಮಾನ ಮಾಡಲಾಯಿತು.

ವೇದಿಕೆಯಲ್ಲಿ, ಡಾ. ಮಂಜುನಾಥ, ಕಮಲಾ ಗುಮಾಸ್ತೆ. ಡಾ. ಮಾಧವಿ ವೆಂಕಟೇಶ್, ಅನ್ನಪೂರ್ಣ ಸದಾಶಿವ ಉಪಸ್ಥಿತಿಯಲ್ಲಿದ್ದರು. ಯಮುನಾ ಕುಲಕರ್ಣಿ, ಮಾತಾಜಿ ಪ್ರಬೋಧಮಯಿ ನಿರ್ವಹಿಸಿದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA